# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ: 12-06-2024 ರಂದು ಅಪರಾಹ್ನ 3.30 ಗಂಟೆಗೆ ನಡೆದ ಸಿಂಡಿಕೇಟಿನ ವಿಶೇಷ ಸಭೆಯ ನಡಾವಳಿ.

ಉಪಸ್ಥಿತರು:

| | | |
|---|---|---|
| 1. | ಪ್ರೊ. ಎನ್.ಕೆ. ಲೋಕನಾಥ್, ಕುಲಪತಿಗಳು | – ಅಧ್ಯಕ್ಷರು |
| 2. | ಪ್ರೊ. ಸೊನರ್ ನಂದಪ್ಪ | – ಸದಸ್ಯರು |
| 3. | ಡಾ. ಟಿ.ಆರ್. ಚಂದ್ರಶೇಖರ್ | – ಸದಸ್ಯರು |
| 4. | ಶ್ರೀ ಕೆ. ಗೋಕುಲ್ ಗೋವರ್ಧನ್ | – ಸದಸ್ಯರು |
| 5. | ಡಾ. ಅಂಥೋಣಿ ಪೌಲ್ ರಾಜ್ | – ಸದಸ್ಯರು |
| 6. | ಪ್ರೊ. ಯಜ್ಞಮೂರ್ತಿ ಶ್ರೀಕಾಂತ್ | – ಸದಸ್ಯರು |
| 7. | ಡಾ. ಗಣೇಶ್ ಕೆ | – ಸದಸ್ಯರು |
| 8. | ಡಾ. ಮುಜ್ಹೀದ ಬಾನು | – ಸದಸ್ಯರು |
| 9. | ಶ್ರೀ ಮಹದೇಶು | – ಸದಸ್ಯರು |
| 10. | ಶ್ರೀ ನಾಗರಾಜು ಸಿ | – ಸದಸ್ಯರು |
| 11. | ಡಾ. ಬಸವರಾಜು ಸಿ | – ಸದಸ್ಯರು |
| 12. | ಪ್ರೊ. ಶಬ್ಬೀರ್ ಮೊಹಮದ ಮುಸ್ತಫ | – ಸದಸ್ಯರು |
| 13. | ಡಾ. ಶಿಲ್ಪ ಜೆ | – ಸದಸ್ಯರು |
| 14. | ಶ್ರೀ ನಟರಾಜು ಹೆಚ್.ಎಸ್ | – ಸದಸ್ಯರು |
| 15. | ಡಾ. ಬಸಪ್ಪ, ಕುಲಸಚಿವ (ಪರೀಕ್ಷಾಂಗ) | – ಸದಸ್ಯರು |
| 16. | ಶ್ರೀಮತಿ ವಿ.ಆರ್. ಶೈಲಜ, K.A.S., **ಕುಲಸಚಿವರು** | – ಸದಸ್ಯ ಕಾರ್ಯದರ್ಶಿ |
| 17. | ಶ್ರೀಮತಿ ರೇಖಾ ಕೆ ಎಸ್, ಕೆ.ಎಸ್.ಎ.ಎಸ್., ಹಣಕಾಸು ಅಧಿಕಾರಿ | – ವಿಶೇಷ ಆಹ್ವಾನಿತರು |
| 18. | ಪ್ರೊ. ಡಿ.ಆನಂದ್, ನಿರ್ದೇಶಕರು (ಪ್ರಭಾರ), ಕಾಲೇಜು ಅಭಿವೃದ್ಧಿ ಮಂಡಳ | – ವಿಶೇಷ ಆಹ್ವಾನಿತರು |

**ಅನುಪಸ್ಥಿತರು**

1. ಪ್ರೊ. ಎ.ಹೆಚ್.ಎಂ. ವಿಜಯಲಕ್ಷ್ಮಿ, ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು.
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.
3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
5. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಮಾನ್ಯ ಕುಲಸಚಿವರು ಸಿಂಡಿಕೇಟಿನ ವಿಶೇಷ ಸಭೆಯಲ್ಲಿ ಅಧ್ಯಕ್ಷತೆ ವಹಿಸಿಕೊಂಡಿರುವ ಮಾನ್ಯ ಕುಲಪತಿಗಳಾದ ಪ್ರೊ. ಎನ್.ಕೆ. ಲೋಕನಾಥ್ ಅವರಿಗೆ, ಅಧಿಕಾರಿ ವರ್ಗದವರಿಗೆ ಹಾಗೂ ಉಪಸ್ಥಿತರಿದ್ದ ಎಲ್ಲಾ ಗೌರವಾನ್ವಿತ ಸದಸ್ಯರುಗಳನ್ನು ಸ್ವಾಗತಿಸಿದರು.

ಮೊದಲಿಗೆ ಹೊಸದಾಗಿ ವಿಶ್ವವಿದ್ಯಾನಿಲಯದ ಕುಲಸಚಿವ (ಪರೀಕ್ಷಾಂಗ)ರಾಗಿ ಅಧಿಕಾರವನ್ನು ವಹಿಸಿಕೊಂಡಿರುವ ಡಾ. ಬಸಪ್ಪ, ಸಾವಯವ ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು ಇವರನ್ನು ಸಭೆಗೆ ಸ್ವಾಗತಿಸಿ ಪರಿಚಯಿಸಿದರು.

ನಂತರ, ಇದುವರೆವಿಗೂ ಸಿಂಡಿಕೇಟ್ ಸದಸ್ಯರಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಈ ಕೆಳಕಂಡ ಸದಸ್ಯರುಗಳ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

1) ಪ್ರೊ. ಕೆ.ಎಂ. ಮಹದೇವನ್, ಕುಲಸಚಿವ (ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
2) ಪ್ರೊ. ಟಿ.ಆರ್. ಮಾರುತಿ, ಪ್ರಾಧ್ಯಾಪಕರು ಹಾಗೂ ಡೀನರು, ಕಾನೂನು ನಿಕಾಯ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ತದನಂತರ ಕುಲಸಚಿವರು ಕಾರ್ಯಸೂಚಿಯಂತೆ ವಿಷಯವನ್ನು ಸಭೆಯ ಮುಂದೆ ಮಂಡಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ ಈ ದಿನ ಕಾಲೇಜುಗಳಿಗೆ ಸಂಯೋಜನೆಯನ್ನು ನೀಡಿರುವ ವರದಿಯ ಅನುಮೋದನೆಗಾಗಿ ಹಾಗೂ 2024-25ನೇ ಸಾಲಿನ ಆಯಾ-ವ್ಯಯ ಅಂದಾಜುಗಳ ಕರಡುಪಟ್ಟಿಯ ಅನುಮೋದನೆಗಾಗಿ ವಿಶೇಷ ಸಭೆಯನ್ನು ಕರೆಯಲಾಗಿದೆ. ಈಗಾಗಲೇ ಪರಾಮರ್ಶನ ಸಮಿತಿ ಹಾಗೂ ಸ್ಥಳೀಯ ತನಿಖಾ ಸಮಿತಿಯು 101 ಕಾಲೇಜುಗಳಿಗೆ ಭೇಟಿ ನೀಡಿ ವರದಿಯನ್ನು ನೀಡಿದ್ದಾರೆ. ಸರ್ಕಾರಕ್ಕೆ 15.6.2024ರೊಳಗೆ ಸಂಯೋಜನಾ ವರದಿಯನ್ನು ಸಲ್ಲಿಸಬೇಕಾಗಿರುವುದರಿಂದ ವಿಷಯಗಳನ್ನು ಸಭೆಗೆ ಮಂಡಿಸಲಾಗಿದೆ ಎಂದು ತಿಳಿಸಿ, ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕ(ಪ್ರಭಾರ)ರಾದ ಪ್ರೊ. ಡಿ.ಆನಂದ್ ಅವರನ್ನು ವಿಶೇಷ ಆಹ್ವಾನಿತರನ್ನಾಗಿ ಆಹ್ವಾನಿಸಲಾಗಿದೆ. ಪ್ರೊ. ಡಿ. ಆನಂದ್ ಅವರು ಸಭೆಗೆ ವರದಿಯನ್ನು ಮಂಡಿಸಬೇಕೆಂದು ಸೂಚಿಸಿದರು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| ವಿಶೇಷ ಸಭೆ **I.1** | 2024-25ನೇ ಶೈಕ್ಷಣಿಕ ವರ್ಷಕ್ಕೆ ಪರಾಮರ್ಶನಾ ಸಮಿತಿ ಮತ್ತು ಸ್ಥಳೀಯ ತನಿಖಾ ಸಮಿತಿಯು ನೀಡಿರುವ ಆನ್‌ಲೈನ್ ಸಂಯೋಜನಾ ವರದಿಗಳನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಿದೆ. |
| | ಪ್ರೊ. ಡಿ. ಆನಂದ್, ನಿರ್ದೇಶಕರು (ಪ್ರಭಾರ), ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಪರಾಮರ್ಶನಾ ಸಮಿತಿ ಮತ್ತು ಸ್ಥಳೀಯ ತನಿಖಾ ಸಮಿತಿಯು ನೀಡಿರುವ ಆನ್‌ಲೈನ್ ಸಂಯೋಜನಾ ವರದಿಗಳನ್ನು ಸಭೆಗೆ ಮಂಡಿಸುತ್ತಾ, ಕಾಲೇಜುಗಳ ಸಂಯೋಜನಾ ವರದಿಯನ್ನು ಸರ್ಕಾರಕ್ಕೆ ದಿನಾಂಕ 15.06.2024ರೊಳಗೆ ಸಲ್ಲಿಸಬೇಕಾಗಿರುವುದರಿಂದ ಹಾಗೂ ಈ ಎಲ್ಲಾ ಪ್ರಕ್ರಿಯೆಗಳು ಆನ್‌ಲೈನ್ ಮುಖಾಂತರವೇ ನಡೆದಿರುವ ವಿಷಯವನ್ನು ಸಭೆಗೆ ತಿಳಿಸುತ್ತಾ ವಿಷಯವನ್ನು ಮಂಡಿಸಿದರು.<br><br>ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿರುವ ಸ್ವಾಯತ್ತ ಮತ್ತು ಸಂಯೋಜಿತ ಕಾಲೇಜುಗಳ ಸಂಬಂಧ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ 59 ಮತ್ತು ಉಪ ಪ್ರಕರಣ 2ರ ಅನ್ವಯ 2024-25ನೇ ಶೈಕ್ಷಣಿಕ ಸಾಲಿಗೆ ಹಾಲಿ ಅಸ್ತಿತ್ವದಲ್ಲಿರುವ ಪ್ರಥಮ ದರ್ಜೆ ಕಾಲೇಜುಗಳಿಗೆ ಸಂಯೋಜನೆ ಮುಂದುವರಿಸಲು/ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೊಸ ಕೋರ್ಸುಗಳು /ವಿಷಯಗಳು/ ಕಾಂಬಿನೇಷನ್‌ಗಳನ್ನು ಪ್ರಾರಂಭಿಸಲು/ ನವೀಕರಿಸಲು ಹಾಗೂ ಹಾಲಿ ಇರುವ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಶಾಶ್ವತ ಸಂಯೋಜನೆ ಕೋರಿರುವ ಕೋರ್ಸುಗಳಿಗೆ ಹೊಸದಾಗಿ ಶಾಶ್ವತ ಸಂಯೋಜನೆ ನೀಡಲು/ಸಂಪೂರ್ಣ ಶಾಶ್ವತ ಸಂಯೋಜನೆ ಹೊಂದಿರುವ ಕಾಲೇಜುಗಳನ್ನು ನವೀಕರಿಸಲು/ಶಿಕ್ಷಣ ಕಾಲೇಜುಗಳಿಗೆ ಸಂಯೋಜನೆ ಮುಂದುವರೆಸಲು/ಹೊಸ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಲು, ಹಾಲಿ ಅಸ್ತಿತ್ವದಲ್ಲಿರುವ ಕಾಲೇಜುಗಳ ಸ್ನಾತಕೋತ್ತರ ಕೋರ್ಸುಗಳಿಗೆ ಸಂಯೋಜನೆ ಮುಂದುವರೆಸಲು, ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೊಸದಾಗಿ ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸಲು ಮತ್ತು ಯುಜಿಸಿ ಆ್ಯಡ್‌ಆನ್‌ನ ಕೋರ್ಸುಗಳನ್ನು ಮುಂದುವರಿಸಲು /ಹಾಲಿ ಅಸ್ತಿತ್ವದಲ್ಲಿರುವ ಕೋರ್ಸುಗಳಿಗೆ ಪ್ರವೇಶಾತಿ ಸಂಖ್ಯೆಯನ್ನು ಹೆಚ್ಚಿಸುವ ಬಗೆಗೆ ಪರಾಮರ್ಶನಾ ಮತ್ತು ಸ್ಥಳೀಯ ವಿಚಾರಣಾ ಸಮಿತಿಯವರು ಕಾಲೇಜುಗಳಿಗೆ ಭೇಟಿ ನೀಡಿ ಭೌತಿಕವಾಗಿ ಪರಿಶೀಲಿಸಿ ಸಲ್ಲಿಸಿರುವ ಆನ್‌ಲೈನ್ ವರದಿಯ ಸಾರಾಂಶ.<br><br>**I. 2024-25ನೇ ಶೈಕ್ಷಣಿಕ ಸಾಲಿಗೆ ಸ್ವಾಯತ್ತ ಕಾಲೇಜುಗಳಿಗೆ ಸಂಯೋಜನೆ ಮುಂದುವರಿಸಲು ಶಿಫಾರಸು ಮಾಡಿರುವ ಕಾಲೇಜುಗಳ ವಿವರ: 05** |

| ಕ್ರಮ ಸಂಖ್ಯೆ | ಕಾಲೇಜಿನ ಹೆಸರು ಮತ್ತು ಸ್ಥಳ | Programmes offered before granting autonomy | Programmes offered after granting autonomy |
|---|---|---|---|
| 1. | ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು | B.Sc, BCA | B.Sc, BCA,<br>P.G.- M.Sc -Physics, Mathematics, Chemistry, Biochemistry, Botany, Microbiology, Applied Zoology |

| | | | | |
|---|---|---|---|---|
| | 2. | ಜೆ.ಎಸ್.ಎಸ್. ಮಹಿಳಾ ಕಾಲೇಜು, ಸರಸ್ವತಿಪುರಂ, ಮೈಸೂರು-570009 | BA, B.Sc, B.Com, BBA<br>Add on courses Human Resources Management, Foreign Trade, Insurance Management<br>M.A. -Economics | B.Sc, B.Com, BBA, BCA<br>P.G. - M.A. -Economics, M.Com, M.Sc.-Chemistry<br>**Add on Courses:**<br>Translation, Proof Reading, Women Studies, Financial Management, Horticulture, Social Welfare, Animation *, Rural Development, Functional English, Retail Management, Basic Mathematics, Photo Journalism *, Good Governance & E-Governance, Women Health & Hygiene, Functional Hindi Marketing Management, Food & Nutrition Science, Agricultural Marketing Management, Bharathiya Samskruthi Darshana, Clinical Laboratory & Techniques<br>Yoga, Dance, Music, Auditing, International Financial Reporting Standards (IFRS) Business Journalism & Corporate Communication, Human Rights, Tourism |
| | 3. | ಜೆ.ಎಸ್.ಎಸ್. ಕಲಾ, ವಿಜ್ಞಾನ & ವಾಣಿಜ್ಯ ಕಾಲೇಜು, ಬಿ.ಎನ್. ರಸ್ತೆ, ಮೈಸೂರು-570025 | BA, B.Sc, B.Com, BBA<br>P.G.- MSW | BA, B.Sc, BCA, B.com, B.Voc<br>P.G.- M.Sc.- Biotechnology, Biochemistry, Computer Science, Physics, Chemistry, Mathematics, Zoology, Botany, M.A.-Kannada, English, MCA, M.Voc. |
| | 4. | ಸಂತ ಫಿಲೋಮಿನಾಸ್ ಕಾಲೇಜು, ಬನ್ನಿಮಂಟಪ ಬಡಾವಣೆ, ಮೈಸೂರು-570015 | BA, B.Sc, B.Com, BSW,BBA, BCA<br>P.G.- M.Sc.- Chemistry, MSW | BA, B.Sc, BBA(TH), B.Com, BSW, BBA, BCA, B.Voc<br>P.G.- M.Sc.-Chemistry, MBA, MCA, MSW, MA -Kannada, Hindi, Food Science & Nutrition, M.Com, English, Mass Communication & Journalism, Computer Science, Physics, Economics, Mathematics, Philosophy, Holistic Spirituality, Biochemistry, Psychology, Criminology & Forensic Science ,<br><br>__Diploma courses__:<br>Medical lab technology, Health Care, Tourism, Travel, Hospitality & Management , Bread & Baking Technology, Diploma - Human Resource Management, Holistic Spirituality, Hotel Management, International Relations, Project |

| | | | |
|---|---|---|---|
| | | | Management, Sports Management, Fashion Designing, Cyber Security, H R Analytics, PG Diploma - Holistic Spirituality, Business Analytics, Data Science, Certificate Courses- Functional English, Functional Kannada, Functional Hindi, Holistic Spirituality, French, Fashion Designing, Advanced Diploma - Sports Management. |
| 5. | ಎಸ್.ಬಿ.ಆರ್.ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು, ಜಯಲಕ್ಷ್ಮಿಪುರಂ, ಮೈಸೂರು-570012 | BA, B.Sc, B.Com, BBA, BCA | BA, B.Sc, B.Com, BBA, BCA, BBA-Hotel Hospitality, Aviation & International Tourism<br>P.G.- M.Com, MCA, MBA, Biotechnology, Microbiology, Biochemistry, Chemistry, MSW, Computer Science, MTTM |

**II.** 2024-25ನೇ ಶೈಕ್ಷಣಿಕ ಸಾಲಿಗೆ ಸಂಯೋಜಿತ ಪ್ರಥಮ ದರ್ಜೆ ಕಾಲೇಜುಗಳಿಗೆ ಸಂಯೋಜನೆ ಮುಂದುವರಿಸಲು ಶಿಫಾರಸು ಮಾಡಿರುವ ಕಾಲೇಜುಗಳ ವಿವರ: 84

| ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು | | | |
|---|---|---|---|
| ಕ್ರಮ ಸಂಖ್ಯೆ | ಕಾಲೇಜಿನ ಹೆಸರು ಮತ್ತು ಸ್ಥಳ | ಶಾಶ್ವತ ಸಂಯೋಜನೆ ಹೊಂದಿರುವ ಕೋರ್ಸುಗಳು | ತಾತ್ಕಾಲಿಕ ಸಂಯೋಜನೆ ಮುಂದುವರಿಕೆ ನೀಡಿರುವ ಕೋರ್ಸುಗಳ ವಿವರ |
| 1. | ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು | B.A. | B.A.,BCA, PG.-M.A – Economics, Sociology, English, Kannada, Political Science, History, Psychology, Geography |
| 2. | ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಮೈಸೂರು | B.Com. | BBA, B.Com. BCA<br>P.G –M.Com, MBA |
| 3. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ, ಮೈಸೂರು | B.A., B.Sc., B.Com, BBA | B.A., B.Sc., B.Com |
| 4. | ಸರ್ಕಾರಿ ಪ್ರಥಮ ದರ್ಜೆ ಸಂಜೆ ಕಾಲೇಜು, ಕುವೆಂಪುನಗರ, ಮೈಸೂರು | - | B.Com, BCA |
| 5. | ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಮೈಸೂರು | B.A., B.Com | B.A., B.Sc., B.Com., BBA, BCA<br>P.G.- M.A.- Kannada |
| 6. | ಚಾಮರಾಜೇಂದ್ರ ದೃಶ್ಯ ಕಲಾ ಕಾಲೇಜು, ಮೈಸೂರು. | B.FA | M.FA |
| 7. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿದ್ಧಾರ್ಥನಗರ, ಮೈಸೂರು | - | B.A. BBA., B.Com, B.Sc, BCA |
| 8. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬನ್ನೂರು | B.A., B.Sc., BBA, B.Com | B.Sc., B.Com. |
| 9. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್. ನಗರ | B.A., B.Com., BBA., B.Sc | B.A., B.Com., B.Sc<br>P.G.- MSW, Kannada, M.Com |
| 10. | ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್. ನಗರ | - | B.A., B.Com., BBA., B.Sc<br>P.G.-M.Com, Chemistry |
| 11. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಾಲಿಗ್ರಾಮ | - | B.A., BBA., B.Com., B.Sc |
| 12. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೆಚ್.ಡಿ.ಕೋಟೆ | B.A. | B.A., BBA., B.Com, B.Sc |
| 13. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸರಗೂರು | - | B.A., BBA., B.Com |
| 14. | ಶ್ರೀ ಡಿ. ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು | B.A., B.Com. | B.A., B.Sc., BBA, B.Com. BCA<br>P.G.- Economics, History, |

| | | | |
|---|---|---|---|
| | | | Political Science, Maths, Kannada, M.Com |
| 15. | ಸರ್ಕಾರಿ ಮಹಿಳಾ ಕಾಲೇಜು. ಹುಣಸೂರು | B.A., B.Com | B.A., B.Sc., B.Com., BBA, BCA |
| 16. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು. ಹನಗೂಡು ಹುಣಸೂರು ತಾ. | - | B.A., B.Com., BBA |
| 17. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು. ಬಿಳಿಕೆರೆ | B.A., B.Com | B.A., BBA |
| 18. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು. ನಂಜನಗೂಡು | BA., B.Com, B.Sc | B.A. B.Sc., BBA |
| 19. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು. ಹುಲ್ಲಹಳ್ಳಿ | - | B.A. B.Sc., B.Com., BBA |
| 20. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು. ಟಿ.ನರಸೀಪುರ | B.A. B.Com., BBA | B.A., B.Sc., B.Com, BCA P.G.-M.Com |
| 21. | ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು. ಭೈರಾಪುರ ಗ್ರಾಮ. ಟಿ.ನರಸೀಪುರ ತಾ | - | B.A., BBA B.Com., BSW, B.Sc, BCA |
| 22. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು. ತಲಕಾಡು. ಟಿ.ನರಸೀಪುರ ತಾ. | - | B.A., B.Com., BBA |
| 23. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು. ಪಿರಿಯಾಪಟ್ಟಣ | B.A., B.Com. | B.A., BBA B.Com., BCA |
| 24. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು. ಬೆಟ್ಟದಪುರ. ಪಿರಿಯಾಪಟ್ಟಣ ತಾ. | - | B.A., B.Com. |
| | **ಮೈಸೂರು ಜಿಲ್ಲೆ ಖಾಸಗಿ ಅನುದಾನಿತ ಕಾಲೇಜುಗಳು** | | |
| 25. | ಶಾರದಾ ವಿಲಾಸ ಕಾಲೇಜು. ಮೈಸೂರು | B.Sc. | B.Sc. B.Com., BBA, BCA P.G.-M.Com, Chemistry |
| 26. | ಬಾಸುದೇವ ಸೋಮಾನಿ ಪ್ರಥಮ ದರ್ಜೆ ಕಾಲೇಜು. ಮೈಸೂರು | B.A., B.Com, BBA | B.A. P.G.-M.Com |
| 27. | ಡಿ. ಬನುಮಯ್ಯ ಕಲಾ ಮತ್ತು ವಾಣಿಜ್ಯ ಕಾಲೇಜು. ಮೈಸೂರು | B.Com. | BA., BBA P.G.-M.Com |
| 28. | ಟೆರೇಷಿಯನ್ ಕಾಲೇಜು. ಮೈಸೂರು | B.A., B.Sc., B.Com. | B.A., B.Sc., BBA, B.Com, BCA P.G.-M.Com, English, Psychology, Biotechnology, Botany |
| 29. | ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು. ಮೈಸೂರು | B.A, B.Com. BBA | B.Com., BCA P.G.-M.Com |
| 30. | ಜೆ.ಎಸ್.ಎಸ್. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು. ನಂಜನಗೂಡು | B.A., B.Sc., B.Com. | B.Sc., B.Com.,BBA, BCA |
| 31. | ವಿದ್ಯೋದಯ ಕಲಾ ಮತ್ತು ವಾಣಿಜ್ಯ ಕಾಲೇಜು. ಟಿ. ನರಸೀಪುರ | B.A., B.Com | B.Com. |
| 32. | ಮಲ್ಲಮ್ಮ ಮರಿಮಲ್ಲಪ್ಪ ಕಲಾ ಮತ್ತು ವಾಣಿಜ್ಯ ಕಾಲೇಜು. ಮೈಸೂರು | B.A.,B.Com | - |
| 33. | ಶ್ರೀ ಚನ್ನಕೇಶವ ಪ್ರಥಮ ದರ್ಜೆ ಕಾಲೇಜು. ಸಾಲಿಗ್ರಾಮ. ಕೆ.ಆರ್.ನಗರ ತಾ.. ಮೈಸೂರು ಜಿಲ್ಲೆ | - | B.A |
| | **ಮೈಸೂರು ಜಿಲ್ಲೆ ಖಾಸಗಿ ಅನುದಾನರಹಿತ ಕಾಲೇಜುಗಳು** | | |
| 34. | ಮಲ್ಲಮ್ಮ ಮರಿಮಲ್ಲಪ್ಪ ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು. ಮೈಸೂರು | - | B.Sc., BBA |
| 35. | ಜಿ.ಎಸ್.ಎಸ್.ಎಸ್. ಸಿಂಹ ಸುಬ್ಬ ಮಹಾಲಕ್ಷ್ಮಿ ಪ್ರಥಮ ದರ್ಜೆ ಕಾಲೇಜು. ಸಿದ್ಧಾರ್ಥನಗರ. ಮೈಸೂರು | BBA | B.Com., BCA |
| 36. | ಡಿ. ಬನುಮಯ್ಯ ಸಂಜೆ ಕಾಲೇಜು. ಮೈಸೂರು | - | B.Com |
| 37. | ಮೈಸೂರು ಮಕ್ಕಳಕೂಟ ಮತ್ತು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮಹಿಳಾ ಕಾಲೇಜು. ಮೈಸೂರು | B.Sc., BBA., BCA, B.Com. | BCA P.G.- M.Com |
| 38. | ಎನ್.ಐ.ಇ. ಪ್ರಥಮ ದರ್ಜೆ ಕಾಲೇಜು. ಮೈಸೂರು | - | B.Sc, BCA, B.Com, BBA |
| 39. | ಎಂ.ಇ.ಎಸ್. ಪ್ರಥಮ ದರ್ಜೆ ಕಾಲೇಜು. | - | BBA., B.Com |

| | | | | |
|---|---|---|---|---|
| | | ಮೈಸೂರು | | |
| | 40. | ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ವಸತಿ ಕಾಲೇಜು, ಮೈಸೂರು | B.A | B.Com., P.G.-M.Com |
| | 41. | ಶ್ರೀಕಾಂತ ಮಹಿಳಾ ಪ್ರಥಮ ದರ್ಜೆ ಕಾಲೇಜು, ಮೈಸೂರು | - | B.A., B.Com. |
| | 42. | ಟಿ.ಟಿ.ಎಲ್. ಕಾಲೇಜ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್, ಮೈಸೂರು | - | BBA., B.Com<br>P.G.- M.Com |
| | 43. | ವಿಶ್ವಕವಿ ಕುವೆಂಪು ಪ್ರಥಮ ದರ್ಜೆ ಕಾಲೇಜು, ಮೈಸೂರು | - | B.A., B.Com., BBA |
| | 44. | ವಿದ್ಯಾವಿಕಾಸ ಪ್ರಥಮ ದರ್ಜೆ ಕಾಲೇಜು, ಮೈಸೂರು | - | BBA, BCA, B.Com.<br>P.G.- MSW |
| | 45. | ಶ್ರೀ ವಾಣಿವಿಲಾಸ ಅರಸು ಮಹಿಳಾ ಪ್ರಥಮ ದರ್ಜೆ ಕಾಲೇಜು, ಮೈಸೂರು | - | B.A., B.Com., BBA, BCA |
| | 46. | ಶ್ರೀ ಲಕ್ಷ್ಮೀಹಯಗ್ರೀವ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್, ಮೈಸೂರು | - | B.Sc., B.Com., BBA |
| | 47. | ಬಿಷಪ್ ನಾರ್ಮನ್ ಕಾರ್ ಸಾರ್ಜೆಂಟ್ ಕಾಲೇಜ್ ಆಫ್ ಕಾಮರ್ಸ್ ಅಂಡ್ ಬಿಸಿನೆಸ್ ಮ್ಯಾನೇಜ್‌ಮೆಂಟ್, ಮೈಸೂರು | - | BBA, B.Com. |
| | 48. | ಎಂ.ಐ.ಟಿ. ಪ್ರಥಮ ದರ್ಜೆ ಕಾಲೇಜು, ಮೈಸೂರು | - | BBA, BCA, B.Com.<br>P.G.-M.Com |
| | 49. | ಶ್ರೀ ಕಾವೇರಿ ಪ್ರಥಮ ದರ್ಜೆ ಕಾಲೇಜು, ಮೈಸೂರು | - | BBA, B.Com, BCA |
| | 50. | ಜ್ಞಾನದೀಪ ಪ್ರಥಮ ದರ್ಜೆ ಕಾಲೇಜು, ಮೈಸೂರು | - | BBA, B.Com |
| | 51. | ಸೆಂಟ್ ಜೋಸೆಫ್ ಪ್ರಥಮ ದರ್ಜೆ ಕಾಲೇಜು, ಮೈಸೂರು | - | B.Sc. BBA, B.Com, BCA |
| | 52. | ಮೈಸೂರು ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಆರ್ಟ್ಸ್, ಮೇಟಗಳ್ಳಿ, ಮೈಸೂರು | - | BBA, B.Com, BCA |
| | 53. | ಕೆ.ಪುಟ್ಟಸ್ವಾಮಿ ಪ್ರಥಮ ದರ್ಜೆ ಕಾಲೇಜು, ಮೈಸೂರು | B.Com | B.Com, BCA |
| | 54. | ಸೇಫಿಯಂಟ್ ಕಾಲೇಜ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್, ಮೈಸೂರು | - | BBA, B.Com., BCA |
| | 55. | ಮೈಸೂರು ಸಿಟಿ ಮೈನಾರಿಟಿ ಪ್ರಥಮ ದರ್ಜೆ ಕಾಲೇಜು, ಮೈಸೂರು | - | BBA, B.Com |
| | 56. | ಬಿ.ಜಿ.ಎಸ್. ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ, ಮೈಸೂರು | - | B.Com, B.Sc., BCA |
| | 57. | ಹಿಂದೂಸ್ತಾನ್ ಕಾಲೇಜು, ಮೈಸೂರು | - | B.Com, BCA |
| | 58. | ಮಹಾತ್ಮ ಗಾಂಧಿ ಪ್ರಥಮ ದರ್ಜೆ ಕಾಲೇಜು, ಮೈಸೂರು | - | BBA, B.Com. |
| | 59. | ಶೇಷಾದ್ರಿಪುರಂ ಪದವಿ ಕಾಲೇಜು, ಹೆಬ್ಬಾಳ್, ಮೈಸೂರು | - | B.Com, BBA, BCA |
| | 60. | ವಿದ್ಯಾಶ್ರಮ ಪ್ರಥಮ ದರ್ಜೆ ಕಾಲೇಜು, ಮೈಸೂರು | - | B.A., B.C.A., BBA, B.Com. |
| | 61. | ಸೆಂಟ್ ಜೋಸೆಫ್ ಮಹಿಳಾ ಕಾಲೇಜು, ಸಾತಗಳ್ಳಿ, ಮೈಸೂರು | - | B.A., BBA, B.Com., BCA,<br>B.Sc |
| | 62. | ಜೀನಿಯಸ್ ಪ್ರಥಮ ದರ್ಜೆ ಕಾಲೇಜು, ಮೈಸೂರು | | B.Com, BBA |
| | 63. | ಕ್ರೈಸ್ಟ್ ಕಾಲೇಜು, ಶ್ರೀರಾಂಪುರ, ಮೈಸೂರು | | B.Com, BBA, B.A., B.Sc., BCA |
| | 64. | ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು, ಹೆಚ್.ಡಿ. ಕೋಟೆ | - | B.A B.Com |
| | 65. | ಶ್ರೀ ವಿಶ್ವಭಾರತಿ ಪ್ರಥಮ ದರ್ಜೆ ಕಾಲೇಜು, ಹೆಚ್.ಡಿ. ಕೋಟೆ | - | B.A B.Com |
| | 66. | ಸಿಟಿಜನ್ಸ್ ವಿಜ್ಞಾನ, ವಾಣಿಜ್ಯ ಮತ್ತು ಮ್ಯಾನೇಜ್‌ಮೆಂಟ್ ಪ್ರಥಮ ದರ್ಜೆ ಕಾಲೇಜು, | - | B.Com, BBA |

| | | | |
|---|---|---|---|
| | ನಂಜನಗೂಡು | | |
| 67. | ಪಿ.ಆರ್.ಎಂ. ವಿಜಯ ಪ್ರಥಮ ದರ್ಜೆ ಕಾಲೇಜು, ಟಿ.ನರಸೀಪುರ | - | B.A B.Com |
| 68. | ಬಿ.ಜಿ.ಎಸ್. ಪ್ರಥಮ ದರ್ಜೆ ಕಾಲೇಜು, ಬನ್ನೂರು | - | B.A B.Com |
| 69. | ಭಾರತ ಮಾತಾ ಪ್ರಥಮ ದರ್ಜೆ ಕಾಲೇಜು, ಕೊಪ್ಪ, ಪಿರಿಯಾಪಟ್ಟಣ ತಾ., ಮೈಸೂರು ಜಿಲ್ಲೆ | - | B.Com, BBA, BCA |
| 70. | ಬಿ.ಜಿ.ಎಸ್. ಪ್ರಥಮ ದರ್ಜೆ ಕಾಲೇಜು, ಅಬ್ಬೂರು. | - | B.A B.Com |
| 71. | ವಿ.ಎಸ್.ಎಸ್. ಪ್ರಥಮ ದರ್ಜೆ ಕಾಲೇಜು, ಸಾಧನಾಪುರ, ರತ್ನಪುರಿ ಕಾಲೋನಿ, ಹುಣಸೂರು ತಾ. | - | B.A |
| 72. | ಜ್ಞಾನಧಾರಾ ಪ್ರಥಮ ದರ್ಜೆ ಕಾಲೇಜು, #50, ಕಾಫಿವರ್ಕ್ಸ್ ಆವರಣ, ಹುಣಸೂರು | - | BA., B.Com, BBA, BCA |
| 73. | ಶ್ರೀ ಛಾಯಾದೇವಿ ಪ್ರಥಮ ದರ್ಜೆ ಕಾಲೇಜು, ಮಂಜುನಾಥ ಬಡಾವಣೆ, ಹುಣಸೂರು | - | B.A B.Com |
| 74. | ಸೆಂಟ್ ಜೋಸಫ್ ಕಾಲೇಜು, ಹುಣಸೂರು. | - | B.Com, BCA., BA, B.Sc |
| 75. | ಕಾವೇರಿ ಕಾಲೇಜ್ ಆಫ್ ಲೈಫ್‌ಸೈನ್ಸ್ ಅಂಡ್ ಮ್ಯಾನೇಜ್ ಮೆಂಟ್, ಮೈಸೂರು | - | B.Sc, BBA-TH |
| 76. | ದೇವಲಾ ಮಹರ್ಷಿ ಪ್ರಥಮ ದರ್ಜೆ ಕಾಲೇಜು, ಮೈಸೂರು | - | B.Com, BBA, BCA |
| 77. | ದಕ್ಷ ಪ್ರಥಮ ದರ್ಜೆ ಕಾಲೇಜು, ಮೈಸೂರು | - | B.Com, BBA, BCA |
| 78. | ಎಂ.ಐ.ಟಿ. ಪದವಿ ಕಾಲೇಜು, ಕೆಸರೆ ಕಸಬಾ ಹೋ. ಮೈಸೂರು ತಾ. & ಜಿಲ್ಲೆ, ಮೈಸೂರು ಪ್ರಥಮ ದರ್ಜೆ ಕಾಲೇಜು, | - | B.Com, BCA |
| 79. | ವಿಕ್ಟರಿ ಪ್ರಥಮ ದರ್ಜೆ ಕಾಲೇಜು, 37/1, ಅಬುಲ್ ಕಲಾಂ ಅಜಾದ ರಸ್ತೆ, ಎನ್.ಆರ್. ಮೊಹಲ್ಲಾ, ಮೈಸೂರು-570007 | - | B.Com, BCA |
| 80. | ಪರಿವರ್ತನ ಪ್ರಥಮ ದರ್ಜೆ ಕಾಲೇಜು, ಕೆ.ಆರ್.ಎಸ್. ರೋಡ್, ಮೈಸೂರು | - | B.Com, BBA, BCA<br>P.G.-MBA, MCA |
| 81. | ಎಂ.ಐ.ಟಿ. ಪ್ರಥಮ ದರ್ಜೆ ಕಾಲೇಜು, ತಾಂಡವಪುರ, ಮೈಸೂರು ಜಿಲ್ಲೆ | - | B.Com, BCA |
| | **ಹೋಟೆಲ್ ಮ್ಯಾನೇಜ್‌ಮೆಂಟ್ ಕಾಲೇಜು** | | |
| 82. | ವಿದ್ಯಾ ವಿಕಾಸ ಇನ್‌ಸ್ಟಿಟ್ಯೂಟ್ ಆಫ್ ಹೋಟೆಲ್ ಮ್ಯಾನೇಜ್‌ಮೆಂಟ್ ಅಂಡ್ ಕೇಟರಿಂಗ್ ಟೆಕ್ನಾಲಜಿ, ಮೈಸೂರು | - | BBA<br>(Tourism and Hospitality) |
| | **ಕೇಂದ್ರ ಸರ್ಕಾರದ ವಾಕ್ ಮತ್ತು ಶ್ರವಣ ಸಂಸ್ಥೆ** | | |
| 83. | ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ, ಮೈಸೂರು | B.A.SLP | B.Ed.Spl.Ed. (H.I.)-<br>M.Ed.SPL.Ed(HI)<br>M.Sc- Speech Language Pathology, Audiology |
| | **ಖಾಸಗಿ ವಾಕ್ ಮತ್ತು ಶ್ರವಣ ಸಂಸ್ಥೆ** | | |
| 84. | ಜೆ.ಎಸ್.ಎಸ್. ವಾಕ್ ಮತ್ತು ಶ್ರವಣ ಸಂಸ್ಥೆ, ಮೈಸೂರು | - | B.A.SLP P.G- MA-SLP,MSLP, Audiology |

**III. 2024-25ನೇ ಶೈಕ್ಷಣಿಕ ಸಾಲಿಗೆ ಸಂಯೋಜಿತ ಶಿಕ್ಷಣ ಕಾಲೇಜುಗಳಿಗೆ ಸಂಯೋಜನೆ ಮುಂದುವರಿಸಲು ಶಿಫಾರಸು ಮಾಡಿರುವ ಕಾಲೇಜುಗಳ ವಿವರ: 15**

| | | |
|---|---|---|
| | **ಶಿಕ್ಷಣ ಕಾಲೇಜುಗಳು** | |
| 1. | ಸರ್ಕಾರಿ ಶಿಕ್ಷಣ ಮಹಾವಿದ್ಯಾಲಯ , ಮೈಸೂರು | B.Ed. |
| 2. | ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್, ಮೈಸೂರು | B.A.B.Ed., B.Sc.B.Ed.<br>M.Ed |
| 3. | ದಿ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್, ಓಂಕಾರಮಲ್ ಸೋಮನಿ ಕಾಲೇಜ್ , ಮೈಸೂರು. | B.Ed. |

| | | |
|---|---|---|
| 4. | ಶಾರದ ವಿಲಾಸ ಕಾಲೇಜ್ ಆಫ್ ಎಜುಕೇಷನ್, ಮೈಸೂರು | B.Ed. |
| 5. | ಸಂಟ್ ಜೋಸಫ್ ಕಾಲೇಜ್ ಆಫ್ ಎಜುಕೇಷನ್, ಮೈಸೂರು | B.Ed. |
| 6. | ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕಗುರು ಪೀಠ ಕಾಲೇಜ್ ಆಫ್ ಎಜುಕೇಷನ್, ಮೈಸೂರು | B.Ed. |
| 7. | ವಿದ್ಯಾವಿಕಾಸ್ ಕಾಲೇಜ್ ಆಫ್ ಎಜುಕೇಷನ್, ಮೈಸೂರು | B.Ed. |
| 8. | ಶ್ರೀ ಛಾಯಾದೇವಿ ಕಾಲೇಜ್ ಆಫ್ ಎಜುಕೇಷನ್, ಮೈಸೂರು | B.Ed. |
| 9. | ಬಿ.ಜಿ.ಎಸ್. ಬಿ.ಎಡ್. ಕಾಲೇಜು, ಕುವೆಂಪುನಗರ, ಮೈಸೂರು | B.Ed. |
| 10. | ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯ, ಮೈಸೂರು | B.Ed. |
| 11. | ಶ್ರೀ ಮಹಾವೀರ ಕಾಲೇಜ್ ಆಫ್ ಎಜುಕೇಷನ್, ಹುಣಸೂರು. | B.Ed. |
| 12. | ಜೆ.ಎಸ್.ಎಸ್. ಇನ್ಸ್‌ಟಿಟ್ಯೂಟ್ ಆಫ್ ಎಜುಕೇಷನ್, ಸುತ್ತೂರು | B.Ed. |
| 13. | ಮಹಾತ್ಮ ಗಾಂಧಿ ಕಾಲೇಜ್ ಆಫ್ ಎಜುಕೇಷನ್, ಮೈಸೂರು | B.Ed. |
| 14. | ಮೌಲನಾ ಅಜಾದ್ ಶಿಕ್ಷಣ ಕಾಲೇಜು, ಮೈಸೂರು | B.Ed. |
| 15. | ಯಡತೊರೆ ಶಿಕ್ಷಣ ಕಾಲೇಜು, ಕೆ.ಆರ್. ನಗರ | B.Ed. |

**IV.** 2024-25ನೇ ಶೈಕ್ಷಣಿಕ ಸಾಲಿನ ಹೊಸ ಪ್ರಥಮ ದರ್ಜೆ ಕಾಲೇಜುಗಳ ವಿವರ: ಯಾವುದೂ ಇಲ್ಲ

**V.** ಸಂಯೋಜನೆಯನ್ನು ರದ್ದುಪಡಿಸಲು ಕೋರಿರುವ ಪ್ರಥಮ ದರ್ಜೆ ಕಾಲೇಜುಗಳು : 02

| ಕ್ರ.ಸಂ | ಕಾಲೇಜಿನ ಹೆಸರು |
|---|---|
| 1 | ಕ್ರಿಸ್ತ ಪ್ರಥಮ ದರ್ಜೆ ಕಾಲೇಜು, 182/145/ಸಿ, ಬನ್ನೂರು ರಸ್ತೆ, ಸಿದ್ದಾರ್ಥನಗರ, ಮೈಸೂರು-570011 |
| 2 | ನೃಪತುಂಗ ಗಣಕ ವಿಜ್ಞಾನ ಮತ್ತು ವಾಣಿಜ್ಯ ಪದವಿ ಕಾಲೇಜು, ಸಿ.ಎ. 3 ಇ ಮತ್ತು ಎಫ್ ಬ್ಲಾಕ್, ರಾಮಕೃಷ್ಣನಗರ -570022, ಮೈಸೂರು |

**VI.** 2024-25ನೇ ಶೈಕ್ಷಣಿಕ ಸಾಲಿಗೆ ಷರತ್ತುಗಳನ್ನು ಪೂರೈಸಿದ ನಂತರವಷ್ಟೇ ಸಂಯೋಜನೆ ಮುಂದುವರೆಸುವಂತೆ ಶಿಫಾರಸು ಮಾಡಿರುವ ಪ್ರಥಮ ದರ್ಜೆ ಕಾಲೇಜುಗಳು : ಯಾವುದೂ ಇಲ್ಲ

**VII.** 2024-25ನೇ ಶೈಕ್ಷಣಿಕ ಸಾಲಿಗೆ ಷರತ್ತುಗಳನ್ನು ಪೂರೈಸಿದ ನಂತರವಷ್ಟೇ ಸಂಯೋಜನೆ ಮುಂದುವರೆಸುವಂತೆ ಷರತ್ತುಬದ್ಧ ಶಿಫಾರಸು ಮಾಡಿರುವ ಶಿಕ್ಷಣ ಕಾಲೇಜುಗಳು : ಯಾವುದೂ ಇಲ್ಲ

**VIII.** 2024-25ನೇ ಶೈಕ್ಷಣಿಕ ಸಾಲಿಗೆ ಸಂಯೋಜಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ AICTE ಅನುಮೋದನೆ ಪಡೆದು ಹೊಸದಾಗಿ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸಲು ಹೊಸ ಸಂಯೋಜನೆಗೆ ಶಿಫಾರಸು ಮಾಡಿರುವ ಕಾಲೇಜುಗಳು: 06

| ಕ್ರ.ಸಂ | ಕಾಲೇಜಿನ ಹೆಸರು | ಕೋರ್ಸುಗಳ ವಿವರ |
|---|---|---|
| 1 | ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು | PG - Diploma in Audio Verbal Therapy - 12 |
| 2 | ದಕ್ಷ ಪ್ರಥಮ ದರ್ಜೆ ಕಾಲೇಜು, ಮೈಸೂರು | MBA-120<br>MCA-60 |
| 3 | ಹಿಂದೂಸ್ತಾನ್ ಕಾಲೇಜು, ಜೆ.ಪಿ. ನಗರ, ಮೈಸೂರು | M.Com.-40 |
| 4 | ಕಾವೇರಿ ಕಾಲೇಜ್ ಆಫ್ ಲೈಫ್ ಸೈನ್ಸ್ ಅಂಡ್ ಮ್ಯಾನೇಜ್‌ಮೆಂಟ್ ಕಾಲೇಜು, ಮೈಸೂರು | MBA-120<br>MCA-120 |
| 5 | ಸಂತ ಫಿಲೋಮಿನಾಸ್ ಕಾಲೇಜು (ಸ್ವಾಯತ್ತ), ಬನ್ನಿಮಂಟಪ ಬಡಾವಣೆ, ಮೈಸೂರು | M.Sc.-Food Science and Nutrition -30<br>M.A.- Kannada - 30<br>M.A.- Hindi - 30 |
| 6 | ಎಸ್.ಬಿ.ಆರ್.ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತ), ಜಯಲಕ್ಷ್ಮಿಪುರಂ, ಮೈಸೂರು | **UG New Courses**<br>Criminology, Forensic Science, Phychology, Biochemistry, Three Majors - CPBc -40 |

**IX.** 2024-25ನೇ ಶೈಕ್ಷಣಿಕ ಸಾಲಿಗೆ ಸಂಯೋಜಿತ ಪದವಿ ಕಾಲೇಜುಗಳ ಹೆಚ್ಚುವರಿ ವಿದ್ಯಾರ್ಥಿ ಪ್ರಮಾಣ/ಹೊಸ ಕೋರ್ಸು/ ವಿಷಯ ಸಮೂಹ/ಹೊಸ ಭಾಷೆ/ಶಾಶ್ವತ ಸಂಯೋಜನೆಗೆ ಶಿಫಾರಸು ಮಾಡಿರುವ ವಿವರ:

1. ಹೆಚ್ಚುವರಿ ವಿದ್ಯಾರ್ಥಿ ಪ್ರಮಾಣ:

| ಕ್ರ.. ಸಂ. | ಕಾಲೇಜಿನ ಹೆಸರು ಮತ್ತು ವಿಳಾಸ | ಕೋರ್ಸುಗಳು | ಕಾಂಬಿ ನೇಷನ್ | ಹಾಲಿ ಇರುವ ಪ್ರವೇಶಾತಿ ಸಂಖ್ಯೆ | ಸಮಿತಿ ಹೆಚ್ಚುವರಿ ಮಂಜೂರು ಮಾಡಿರುವ ಪ್ರವೇಶಾತಿ ಸಂಖ್ಯೆ |
|---|---|---|---|---|---|
| 1 | ಶೇಷಾದ್ರಿಪುರಂ ಪದವಿ ಕಾಲೇಜು, ಮೈಸೂರು | BCA | - | 120 | **60** |
| 2 | ಜಿ.ಎಸ್.ಎಸ್.ಎಸ್. ಸಿಂಹ ಸುಬ್ಬಮಹಾಲಕ್ಷ್ಮಿ ಪ್ರಥಮ ದರ್ಜೆ ಕಾಲೇಜು, ಮೈಸೂರು | BCA | - | 120 | **60** |
| 3 | ಹಿಂದೂಸ್ತಾನ್ ಕಾಲೇಜು, ಮೈಸೂರು | BCA | - | 60 | **60** |
| 4 | ಎಂ.ಐ.ಟಿ. ಪದವಿ ಕಾಲೇಜು, ಕೆಸರೆ ಕಸಬಾ ಹೋ. ಮೈಸೂರು ತಾ. & ಜಿಲ್ಲೆ, | BCA | - | 60 | **120** |

2. ಹೊಸ ಕೋರ್ಸು/ಕಾಂಬಿನೇಷನ್/ಭಾಷೆ:

| ಕ್ರ.. ಸಂ. | ಕಾಲೇಜಿನ ಹೆಸರು ಮತ್ತು ವಿಳಾಸ | ಕೋರ್ಸುಗಳು | ಕಾಂಬಿನೇಷನ್ | ಪ್ರವೇಶಾತಿ ಸಂಖ್ಯೆ |
|---|---|---|---|---|
| 1 | ಜೀನಿಯಸ್ ಪ್ರಥಮ ದರ್ಜೆ ಕಾಲೇಜು, ಮೈಸೂರು | BCA | - | **60** |
| 2 | ಕಾವೇರಿ ಕಾಲೇಜ್ ಆಫ್ ಲೈಫ್ ಸೈನ್ಸ್ ಅಂಡ್ ಮ್ಯಾನೇಜ್‌ಮೆಂಟ್ ಕಾಲೇಜು, ಮೈಸೂರು | BCA<br>BBA | -<br>- | **60**<br>**60** |

3. ಶಾಶ್ವತ ಸಂಯೋಜನೆಗೆ ಶಿಫಾರಸು ಮಾಡಿರುವ ಪ್ರಥಮ ದರ್ಜೆ ಕಾಲೇಜುಗಳು:

| ಕ್ರ.. ಸಂ. | ಕಾಲೇಜಿನ ಹೆಸರು ಮತ್ತು ವಿಳಾಸ | ಶಾಶ್ವತ ಸಂಯೋಜನೆ ಕೋರ್ಸುಗಳು | ಪ್ರವೇಶಾತಿ ಸಂಖ್ಯೆ |
|---|---|---|---|
| 1 | ಎಂ.ಐ.ಟಿ. ಪ್ರಥಮ ದರ್ಜೆ ಕಾಲೇಜು, #169/1, 29/1, 3ನೇ ಹಂತ, ಪೋರ್ಟ್ ಮೊಹಲ್ಲಾ, ಮಾನಂದವಾಡಿ ರಸ್ತೆ, ಮೈಸೂರು | B.Com<br>BBA<br>BCA | **60**<br>**60**<br>**60** |
| 2 | ಎನ್.ಐ.ಇ. ಪ್ರಥಮ ದರ್ಜೆ ಕಾಲೇಜು, ಎನ್.ಐ.ಇ. ಕ್ಯಾಂಪಸ್, ವಿಶ್ವೇಶ್ವರನಗರ, ಮೈಸೂರು | B.Sc.<br>BCA<br>B.Com. | **120**<br>**180**<br>**120** |
| 3 | ಶೇಷಾದ್ರಿಪುರಂ ಪದವಿ ಕಾಲೇಜು, ಮೈಸೂರು | B.Com<br>BBA<br>BCA | **120**<br>**60**<br>**60** |

**X.** 2024-25ನೇ ಶೈಕ್ಷಣಿಕ ಸಾಲಿಗೆ ಸಂಯೋಜಿತ ಪದವಿ ಕಾಲೇಜುಗಳಲ್ಲಿರುವ ಸ್ನಾತಕೋತ್ತರ ಕೋರ್ಸುಗಳಿಗೆ ಹೆಚ್ಚುವರಿ ಪ್ರವೇಶಾತಿ ಸಂಖ್ಯೆಗೆ ಶಿಫಾರಸು ಮಾಡಿರುವ ವಿವರ :

ಯಾವುದೂ ಇಲ್ಲ.

**ತೀರ್ಮಾನ** ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ 59(3)ರ ಅನ್ವಯ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಟ್ಟ ಸ್ವಾಯತ್ತ ಮತ್ತು ಸಂಯೋಜಿತ ಕಾಲೇಜುಗಳಿಗೆ 2024-25ನೇ ಶೈಕ್ಷಣಿಕ ಸಾಲಿಗೆ ಹಾಲಿ ಅಸ್ತಿತ್ವದಲ್ಲಿರುವ ಪ್ರಥಮ ದರ್ಜೆ ಕಾಲೇಜುಗಳಿಗೆ ಸಂಯೋಜನೆ ಮುಂದುವರಿಸಲು/ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೊಸ ಕೋರ್ಸುಗಳು /ವಿಷಯಗಳು/ ಕಾಂಬಿನೇಷನ್‌ಗಳನ್ನು ಪ್ರಾರಂಭಿಸಲು/ ನವೀಕರಿಸಲು ಹಾಗೂ ಹಾಲಿ ಇರುವ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಶಾಶ್ವತ ಸಂಯೋಜನೆ ಕೋರಿರುವ ಕೋರ್ಸುಗಳಿಗೆ ಹೊಸದಾಗಿ ಶಾಶ್ವತ ಸಂಯೋಜನೆ

ನೀಡಲು/ಸಂಪೂರ್ಣ ಶಾಶ್ವತ ಸಂಯೋಜನೆ ಹೊಂದಿರುವ ಕಾಲೇಜುಗಳನ್ನು ನವೀಕರಿಸಲು/ಶಿಕ್ಷಣ ಕಾಲೇಜುಗಳಿಗೆ ಸಂಯೋಜನೆ ಮುಂದುವರೆಸಲು/ಹೊಸ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಲು, ಹಾಲಿ ಅಸ್ತಿತ್ವದಲ್ಲಿರುವ ಕಾಲೇಜುಗಳ ಸ್ನಾತಕೋತ್ತರ ಕೋರ್ಸುಗಳಿಗೆ ಸಂಯೋಜನೆ ಮುಂದುವರೆಸಲು, ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೊಸದಾಗಿ ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸಲು ಮತ್ತು ಯುಜಿಸಿ ಆ್ಯಡ್ಆನ್‌ನ ಕೋರ್ಸುಗಳನ್ನು ಮುಂದುವರಿಸಲು /ಹಾಲಿ ಅಸ್ತಿತ್ವದಲ್ಲಿರುವ ಕೋರ್ಸುಗಳಿಗೆ ಪ್ರವೇಶಾತಿ ಸಂಖ್ಯೆಯನ್ನು ಹೆಚ್ಚಿಸುವ ಬಗೆಗೆ ಪರಾಮರ್ಶನಾ ಮತ್ತು ಸ್ಥಳೀಯ ವಿಚಾರಣಾ ಸಮಿತಿಯವರು ಕಾಲೇಜುಗಳಿಗೆ ಭೇಟಿ ನೀಡಿ ಭೌತಿಕವಾಗಿ ಮೂಲಭೂತ ಸೌಕರ್ಯಗಳನ್ನು ಪರಿಶೀಲಿಸಿ ಸಲ್ಲಿಸಿರುವ ವರದಿ/ಶಿಫಾರಸುಗಳನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿ ರಾಜ್ಯ ಸರ್ಕಾರದ ಅನುಮೋದನೆಗೆ ಕಳುಹಿಸಿ ಕೊಡಲು ತೀರ್ಮಾನಿಸಿತು.

2 ಓಂ ಶ್ರೀನಿಕೇತನ ಟ್ರಸ್ಟ್(ರಿ), ಶ್ರೀರಂಗಪಟ್ಟಣ ಇವರು ಕೆ.ಆರ್.ಎಸ್. ರಸ್ತೆ, ಮೇಟಗಳ್ಳಿಯಲ್ಲಿರುವ ಪರಿವರ್ತನ ಪ್ರಥಮ ದರ್ಜೆ ಕಾಲೇಜಿನಲ್ಲಿ 2023-24ನೇ ಶೈಕ್ಷಣಿಕ ಸಾಲಿನಲ್ಲಿ ಹೊಸದಾಗಿ MBA ಮತ್ತು MCA ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸಿದ್ದು, ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆ ಹಾಗೂ ಅನುಸಮರ್ಥನೆಗಾಗಿ ಮಂಡಿಸುವ ಬಗೆಗೆ.

1. ಪರಿವರ್ತನ ಪ್ರಥಮ ದರ್ಜೆ ಕಾಲೇಜಿನವರು 2023-24ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ MBA ಮತ್ತು MCA ಸ್ನಾತಕೋತ್ತರ ಕೋರ್ಸುಗಳನ್ನು AICTE ಇವರಿಂದ ಅನುಮೋದನೆ ಮತ್ತು ವಿಶ್ವವಿದ್ಯಾನಿಲಯ ಹಾಗೂ ಸರ್ಕಾರದಿಂದ ನಿರಾಕ್ಷೇಪಣಾ ಪತ್ರಗಳನ್ನು ಪಡೆದು ವಿಶ್ವವಿದ್ಯಾನಿಲಯದ ಸಂಯೋಜನೆಗಾಗಿ ಕೋರಿದ್ದರು. ಮಾನ್ಯ ಕುಲಸಚಿವರ ಆದೇಶದಂತೆ ಸ್ಥಳೀಯ ವಿಚಾರಣಾ ಸಮಿತಿಯನ್ನು ರಚಿಸಿ, ಸಮಿತಿಯು ದಿನಾಂಕ 31.08.2023ರಂದು ಕಾಲೇಜಿಗೆ ಭೇಟಿ ನೀಡಿ ಪರಿಶೀಲಿಸಿ MBA ಮತ್ತು MCA ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸಲು ಶಿಫಾರಸು ಮಾಡಿರುತ್ತದೆ. ಈ ಸಂಬಂಧ ಪ್ರಾಧಿಕಾರಗಳ ಅನುಮೋದನೆಯನ್ನು ಕಾಯ್ದಿರಿಸಿ ಕಾಲೇಜಿಗೆ ಸಂಯೋಜನಾ ಆದೇಶವನ್ನು ನೀಡಲಾಗಿದೆ. ಆದ್ದರಿಂದ ಸದರಿ ಕಾಲೇಜಿನ ಸ್ನಾತಕೋತ್ತರ ಕೋರ್ಸುಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆ ಹಾಗೂ ಅನುಸಮರ್ಥನೆಗಾಗಿ ಮಂಡಿಸಿದೆ.

| ಕ್ರ..ಸಂ. | ಕಾಲೇಜಿನ ಹೆಸರು ಮತ್ತು ವಿಳಾಸ | ಕೋರ್ಸುಗಳು | ಪ್ರವೇಶಾತಿ ಸಂಖ್ಯೆ |
|---|---|---|---|
| 1 | ಪರಿವರ್ತನ ಪ್ರಥಮ ದರ್ಜೆ ಕಾಲೇಜು, ಕೆ.ಆರ್.ಎಸ್. ರಸ್ತೆ, ಮೇಟಗಳ್ಳಿ, ಮೈಸೂರು | MBA | 120 |
| | | MCA | 60 |

2. 2024-25ನೇ ಶೈಕ್ಷಣಿಕ ಸಾಲಿನಲ್ಲಿ ಕಾಲೇಜಿನ ಹೆಸರು ಬದಲಾವಣೆ ಮಾಡಿರುವ ಕಾಲೇಜಿನ ವಿವರ:

| ಕ್ರ..ಸಂ. | ಕಾಲೇಜಿನ ಹೆಸರು | ಬದಲಾವಣೆ ಮಾಡಿರುವ ಕಾಲೇಜಿನ ಹೆಸರು |
|---|---|---|
| 1 | ಪರಿವರ್ತನ ಪ್ರಥಮ ದರ್ಜೆ ಕಾಲೇಜು, ಕೆ.ಆರ್.ಎಸ್. ರಸ್ತೆ, ಮೇಟಗಳ್ಳಿ, ಮೈಸೂರು | ಪರಿವರ್ತನ ಬಿಸಿನೆಸ್ ಸ್ಕೂಲ್, ಕೆ.ಆರ್.ಎಸ್. ರಸ್ತೆ, ಮೇಟಗಳ್ಳಿ, ಮೈಸೂರು ಎಂದು ಸ್ಥಳೀಯ ವಿಚಾರಣಾ ಸಮಿತಿಯು ಶಿಫಾರಸು ಮಾಡಿರುತ್ತದೆ. |

BCA, BBA MCA, MBA ಕೋರ್ಸುಗಳನ್ನು ಪ್ರಾರಂಭಿಸಿ ಹೆಚ್ಚುವರಿ ಪ್ರವೇಶಾತಿಯನ್ನು ಕೋರಿರುವ ಹಾಗೂ ಹೊಸದಾಗಿ ಪ್ರಾರಂಭಿಸಲಿರುವ ಕಾಲೇಜಿನವರು AICTE ಯಿಂದ ಅನುಮೋದನೆಯ ಆದೇಶದ ಪ್ರತಿ ಸಲ್ಲಿಸಿದ ನಂತರ ವಿಶ್ವವಿದ್ಯಾನಿಲಯದಿಂದ 2024-25 ನೇ ಶೈಕ್ಷಣಿಕ ಸಾಲಿನ ಸಂಯೋಜನೆಯ ಆದೇಶವನ್ನು ನೀಡಲಾಗುವುದೆಂದು ಹಾಗೂ ಕಾಲೇಜುಗಳು ಹೆಚ್ಚುವರಿಯಾಗಿ ಕೋರಿರುವ ಸೀಟುಗಳನ್ನು AICTE ಯಿಂದ ಅನುಮತಿ ಪಡೆಯಬೇಕೆಂದು ಹಾಗೂ ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯದಿಂದ ಹೆಚ್ಚುವರಿ ಸೀಟುಗಳನ್ನು ನೀಡಲು ಅವಕಾಶ ಇರುವುದಿಲ್ಲ ಎಂಬ ಅಂಶವನ್ನು ಈಗಾಗಲೇ ಎಲ್ಲಾ ಕಾಲೇಜುಗಳಿಗೆ ತಿಳಿಸಿರುವುದಾಗಿ ಸಭೆಗೆ ತಿಳಿಸಿದರು.

ಮುಂದುವರೆದು, ಪ್ರೊ. ಡಿ. ಆನಂದ್ ಅವರು ಪ್ರಸ್ತುತ ಮಂಡಿಸಿರುವ ವಿಷಯಗಳಿಗೆ ಸಿಂಡಿಕೇಟ್ ಸಭೆಯು ಅನುಮೋದನೆಯನ್ನು ನೀಡಿದರೆ ದಿನಾಂಕ : 15.06.2024ರೊಳಗೆ ಸಕಾರಕ್ಕೆ ಸಲ್ಲಿಸಲು ಅನುವು ಮಾಡಿಕೊಟ್ಟಂತಾಗುತ್ತದೆ ಎಂದು ತಿಳಿಸುತ್ತಾ, ಸಿದ್ದಪಡಿಸಿರುವ ವರದಿಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆ ಹಾಗೂ ಅನುಸಮರ್ಥನೆಗಾಗಿ ಮಂಡಿಸಿದರು.

| | |
|---|---|
| ತೀರ್ಮಾನ | ಸ್ಥಳೀಯ ವಿಚಾರಣಾ ಸಮಿತಿಯ ಶಿಫಾರಸಿನನ್ವಯ ಹಾಗೂ ಪರಿವರ್ತನ ಪ್ರಥಮ ದರ್ಜೆ ಕಾಲೇಜಿನವರು AICTE ಇವರಿಂದ ಅನುಮೋದನೆ ಪಡೆದು 2023-24ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ MBA ಮತ್ತು MCA ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸುವ ಸಂಬಂಧ ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಅನುಮೋದನೆಯನ್ನು ಕಾಯ್ದಿರಿಸಿ ಕಾಲೇಜಿಗೆ ಸಂಯೋಜನಾ ಆದೇಶ ನೀಡಿರುವುದನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಸಮರ್ಥಿಸಿತು ಹಾಗೂ 2024-25ನೇ ಶೈಕ್ಷಣಿಕ ಸಾಲಿನಿಂದ ಪರಿವರ್ತನ ಪ್ರಥಮ ದರ್ಜೆ ಕಾಲೇಜು, ಕೆ.ಆರ್.ಎಸ್. ರಸ್ತೆ, ಮೇಟಗಳ್ಳಿ, ಮೈಸೂರು ಅನ್ನು ಪರಿವರ್ತನ ಬಿಸಿನೆಸ್ ಸ್ಕೂಲ್, ಕೆ.ಆರ್.ಎಸ್. ರಸ್ತೆ, ಮೇಟಗಳ್ಳಿ, ಮೈಸೂರು ಎಂದು ಬದಲಾವಣೆ ಮಾಡಿರುವುದನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.<br><br>BCA, BBA MCA, MBA ಕೋರ್ಸುಗಳನ್ನು ಪ್ರಾರಂಭಿಸಿ ಹೆಚ್ಚುವರಿ ಪ್ರವೇಶಾತಿಯನ್ನು ಕೋರಿರುವ ಹಾಗೂ ಹೊಸದಾಗಿ ಪ್ರಾರಂಭಿಸಲಿರುವ ಕಾಲೇಜಿನವರು AICTE ಯಿಂದ ಅನುಮೋದನೆಯ ಆದೇಶದ ಪ್ರತಿ ಸಲ್ಲಿಸಿದ ನಂತರ ವಿಶ್ವವಿದ್ಯಾನಿಲಯದಿಂದ 2024-25ನೇ ಶೈಕ್ಷಣಿಕ ಸಾಲಿನ ಸಂಯೋಜನೆಯ ಆದೇಶವನ್ನು ನೀಡಲಾಗುವ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| | ಕುಲಸಚಿವರು ತಡವಾಗಿ ಆಗಮಿಸಿದ ಸಿಂಡಿಕೇಟ್ ಆರು (07) ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು. ಹಾಗೂ ವಿಶೇಷ ಸಭೆಯ ಕಾರ್ಯಸೂಚಿಯ 1 ಮತ್ತು 4ನೇ ವಿಷಯಗಳನ್ನು ಸಭೆಗೆ ಮಂಡಿಸಿ ಸಭೆಯ ಅನುಮೋದನೆಯನ್ನು ಪಡೆದಿರುವುದನ್ನು ಸಭೆಯ ಗಮನಕ್ಕೆ ತರುತ್ತಾ, 2023-24ನೇ ಸಾಲಿನ ವಿವಿಯ ಆಯವ್ಯಯ ಅಂದಾಜುಗಳಲ್ಲಿ ಪರಿಷ್ಕರಿಸಿರುವುದನ್ನು "ಸಿಂಡಿಕೇಟ್' ಸಭೆಯ ಅನುಮೋದನೆಗಾಗಿ ಹಾಗೂ 2024-25ನೇ ಆರ್ಥಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜುಗಳ "ಕರಡು" ಪಟ್ಟಿಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸುವುದು ಎಂದು ತಿಳಿಸುತ್ತಾ, ಆಯವ್ಯಯ ಅಂದಾಜುಗಳನ್ನು ಸಿಂಡಿಕೇಟ್ ಸಭೆಗೆ ಮಂಡಿಸಲು ಹಣಕಾಸು ಅಧಿಕಾರಿಗಳಿಗೆ ತಿಳಿಸಿದರು. |
| | ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಆಯವ್ಯಯ ಅಂದಾಜನ್ನು ಮಂಡಿಸಲು ಮುಂದಾದ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರ ಅನುಮತಿಯನ್ನು ಕೋರುತ್ತಾ, ಕಾರ್ಯಸೂಚಿಯ ವಿಷಯವು ನಮಗೆ ನೆನ್ನೆ ಮಧ್ಯಾಹ್ನ ಅಂದರೆ ದಿನಾಂಕ 11.06.2024ರಂದು ತಲುಪಿರುವುದೆಂದು ತಿಳಿಸಿದರು.<br><br>ಹಾಗೂ ಡಾ. ಶಿಲ್ಪಾ ಜೆ ಅವರು ಮಾತನಾಡಿ ಸಂಯೋಜನೆಗೆ ಸಂಬಂಧಿಸಿದ ಕಾರ್ಯಸೂಚಿಯ ಮಾಹಿತಿಯು ನಮಗೆ ಮೊದಲೆ ತಲುಪಿದ್ದು, ಆಯವ್ಯಯ ಅಂದಾಜುಗಳ ಪಟ್ಟಿಯು ದಿನಾಂಕ 11.06.2024ರ ಸಂಜೆ 5.30ರ ದೊರಕಿದೆ ಎಂದು ಸಭೆಯ ಗಮನಕ್ಕೆ ತಂದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ವಿಶೇಷ ಸಭೆಯನ್ನು ಕರೆಯುವುದು ಅತ್ಯಗತ್ಯವಾದ ವಿಷಯವನ್ನು ಚರ್ಚಿಸಲು ಹಾಗೂ ತುರ್ತು ಸಂದರ್ಭವಿದ್ದಾಗ ಎಂದು ಸಭೆಗೆ ತಿಳಿಸಿದರು. ಹಾಗೆಯೇ ಆಯವ್ಯಯ ಅಂದಾಜುಗೆ ಸಂಬಂಧಪಟ್ಟಂತೆ ಈಗಾಗಲೇ ಹಣಕಾಸು ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆಯನ್ನು ಪಡೆಯಲಾಗಿದೆ. ಹಣಕಾಸು ಸಮಿತಿಯಲ್ಲಿ ಸರ್ಕಾರದ ನಾಮನಿರ್ದೇಶಿತ ಸದಸ್ಯರು, ಸಿಂಡಿಕೇಟ್‌ನ ಸದಸ್ಯರು ಸಹ ಇರುತ್ತಾರೆ ಎಂದು ಸಭೆಯ ಗಮನಕ್ಕೆ ತಂದರು. ಆಯವ್ಯಯ ಅಂದಾಜುಗಳ ಪಟ್ಟಿಗೆ ಅನುಮೋದನೆಯನ್ನು ಮುಂದಿನ ಸಿಂಡಿಕೇಟ್ ಸಭೆಗೆ ಮುಂದೂಡುವುದಾದರೆ ಮುಂದೂಡಬಹುದು ಎಂದು ತಿಳಿಸಿದರು.<br><br>ಶ್ರೀ ಸಿ. ನಾಗರಾಜು ಅವರು ಮಾತನಾಡಿ ಅನಿವಾರ್ಯ ಕಾರಣಗಳಿಂದ ಸಭೆಗೆ ನಿಗದಿತ ಸಮಯದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ. ಆದಕಾರಣ ಈಗ ಸದರಿ ವಿಷಯಗಳನ್ನು ಚರ್ಚಿಸಲು ಅವಕಾಶ ಮಾಡಿಕೊಡಬೇಕಾಗಿ ಕೋರಿದರು.<br><br>ಶ್ರೀ ನಟರಾಜು ಹೆಚ್.ಎಸ್. ಅವರು ಮಾತನಾಡಿ ಕಾರ್ಯಸೂಚಿಯಲ್ಲಿರುವ ವಿಷಯವನ್ನು ಮತ್ತೊಮ್ಮೆ ಚರ್ಚಿಸಲು ಅವಕಾಶ ಮಾಡಿಕೊಡಬೇಕಾಗಿ ಕೋರಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ಈಗಾಗಲೇ ವಿಷಯವನ್ನು ಚರ್ಚಿಸಿ ಕಾಲೇಜುಗಳ ಸಂಯೋಜನೆಗೆ ಸಂಬಂಧಿಸಿದಂತೆ ಸದಸ್ಯರುಗಳು ಅನುಮೋದನೆಯನ್ನು ನೀಡಿದ್ದಾರೆ ಎಂದು ತಿಳಿಸಿದರು.<br><br>ಶ್ರೀ ನಾಗರಾಜು ಸಿ. ಅವರು ಮಾತನಾಡಿ ಕಾಲೇಜುಗಳಿಗೆ ತನಿಖಾ ಸಮಿತಿಯು ಭೇಟಿ ನೀಡಿ ನೀಡಿರುವ ವರದಿಯನ್ನು ಪ್ರತ್ಯೇಕವಾಗಿ ಎಲ್ಲಾ ಕಾಲೇಜುಗಳ ವರದಿಯನ್ನು ವಿವರವಾಗಿ ನೀಡುವಂತೆ ಕೋರಿದರು. |

ಪ್ರೊ. ಡಿ. ಆನಂದ್ ಅವರು ಮಾತನಾಡಿ ಸಿಂಡಿಕೇಟ್ ಸಭೆಗೆ ಪ್ರತ್ಯೇಕವಾಗಿ ಒಂದೊಂದು ಕಾಲೇಜಿನ ವರದಿಯನ್ನು ಮಂಡಿಸಲಾಗುವುದಿಲ್ಲ. ಈ ಪ್ರಕ್ರಿಯೆಯು ಆನ್‌ಲೈನ್ ಮುಖಾಂತರ ಯುಯುಸಿಎಂಎಸ್‌ನಲ್ಲಿ ನಡೆಯುತ್ತದೆ. ವಿಶ್ವವಿದ್ಯಾನಿಲಯವು ರಚಿಸಿರುವ ಪರಾಮರ್ಶನ ಹಾಗೂ ತನಿಖಾ ಸ್ಥಳೀಯ ಸಮಿತಿಯವರು ಭೇಟಿ ಮಾಡಿ ವರದಿಯನ್ನು ನೀಡಿದ ಆಧಾರದ ಮೇಲೆ ಯುಯುಸಿಎಂಎಸ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ ಎಂಬ ಪ್ರಕ್ರಿಯೆಯ ಸಂಪೂರ್ಣ ಮಾಹಿತಿಯನ್ನು ಸಭೆಗೆ ತಿಳಿಸಿದರು.

ಶ್ರೀ ಮಹದೇಶು ಎಸ್. ಅವರು ಮಾತನಾಡಿ ನಾವು ಕಾಲೇಜಿಗೆ ಸಂಯೋಜನೆಯನ್ನು ನೀಡುವಂತಹ ಸಂದರ್ಭದಲ್ಲಿ ಇರುವಂತಹ ಪ್ರಮುಖವಾದ ಮಾನದಂಡಗಳು ಯಾವುವು ಎಂದು ತಿಳಿಸಿಕೊಡಬೇಕಾಗಿ ಕೋರಿದರು.

ಪ್ರೊ. ಡಿ. ಆನಂದ್ ಅವರು ಮಾತನಾಡಿ ಕಾಲೇಜುಗಳಿಗೆ ಭೌತಿಕವಾಗಿ ಭೇಟಿ ನೀಡಿ, ಕಾಲೇಜಿನಲ್ಲಿ ಮೂಲಭೂತ ಸೌಕರ್ಯಗಳನ್ನು ಪರಾಮರ್ಶಿಸಬೇಕಾಗುತ್ತದೆ. ಪುಸ್ತಕ ಭಂಡಾರ, ಟಾಯ್ಲೆಟ್‌ಗಳು, ಅಧ್ಯಾಪಕ ವೃಂದದವರ ಬಗ್ಗೆ ಹೀಗೆ ಹತ್ತು ಹಲವು ವಿಷಯಗಳನ್ನು ಪರಿಶೀಲಿಸಿ ವರದಿಯನ್ನು ನೀಡಲಾಗಿರುತ್ತದೆ ಎಂದು ತಿಳಿಸಿದರು.

ಶ್ರೀ ಮಹದೇಶು ಅವರು ಮಾತನಾಡಿ ಸೇಫಿಯೆಂಟ್ ಕಾಲೇಜಿನ ಬಗ್ಗೆ ಕೇಳಿದರು.

ಪ್ರೊ. ಆನಂದ್ ಡಿ. ಅವರು ಮಾತನಾಡಿ ಸೇಫಿಯೆಂಟ್ ಕಾಲೇಜು ಹಳೆಯ ಕಾಲೇಜಾಗಿದ್ದುದರ ಬಗ್ಗೆ ಮಾಹಿತಿಯನ್ನು ನೀಡಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಕಾಲೇಜುಗಳ ಮಾಹಿತಿ ಬೇಕಾದಲ್ಲಿ ತಾವುಗಳು ಕಾಲೇಜು ಅಭಿವೃದ್ಧಿ ಮಂಡಳಿಯ ಕಛೇರಿಗೆ ಹೋಗಿ ಬೇಕಾದಂತಹ ಮಾಹಿತಿಯನ್ನು ಪಡೆಯಬೇಕೆಂದು ತಿಳಿಸಿದರು. ಈಗಾಗಲೇ ಕಾಲೇಜುಗಳ ಬಗ್ಗೆ ಸರ್ಕಾರವು ಸಹ ಹಲವಾರು ಬದಲಾವಣೆಗಳನ್ನು ತಂದಿದೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಸಿಂಡಿಕೇಟ್ ಸದಸ್ಯರುಗಳಾದ ನಾವುಗಳು ಕೇಳುವಂತಹ ಮಾಹಿತಿಗಳನ್ನು ನೀಡಲೇಬೇಕು ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ ಕಾಲೇಜಿನ ಬಗೆಗಿನ ಮಾಹಿತಿ ಬೇಕಾದಲ್ಲಿ ಯುಯುಸಿಎಂಎಸ್ ಪೋರ್ಟಲ್‌ನಲ್ಲಿ ಚೆಕ್ ಮಾಡಿದರೆ ಎಲ್ಲಾ ಮಾಹಿತಿಗಳು ದೊರಕುತ್ತದೆ ಹಾಗೂ ಆಯಾಯ ಕಾಲೇಜಿನವರೇ ಯುಯುಸಿಎಂಎಸ್‌ನಲ್ಲಿ ಅಪ್‌ಲೋಡ್ ಮಾಡಲಾಗುತ್ತದೆ ಎಂದು ತಿಳಿಸಿದರು

ಶ್ರೀ ನಾಗರಾಜು ಅವರು ಮಾತನಾಡಿ, ಕಾಲೇಜುಗಳ ಸಂಯೋಜನೆಗೆ ನಾವು ಒಪ್ಪಿಗೆಯನ್ನು ನೀಡುವುದಿಲ್ಲವೆಂದು ತಿಳಿಸಿದರು.

ಡಾ. ಮುಜೀದಾಬಾನು ಅವರು ಮಾತನಾಡಿ, ಆಯಾಯ ಕಾಲೇಜಿನವರೆ ಯುಯುಸಿಎಂಎಸ್ ಪೋರ್ಟಲ್ ನಲ್ಲಿ ಮಾಹಿತಿಯನ್ನು ಅಪ್‌ಲೋಡ್ ಮಾಡಲಾಗುತ್ತದೆ. ವಿಳಾಸ, ಅಧ್ಯಾಪಕರುಗಳ ಸಂಖ್ಯೆ, ಕ್ಲಾಸ್‌ರೂಂನ ಸಂಖ್ಯೆ ಹೀಗೆ ಇರುವ ಮಾಹಿತಿಗಳನ್ನು ಅಪ್‌ಲೋಡ್ ಮಾಡಲಾಗಿರುತ್ತದೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ನೀವು ಯಾವ ಕ್ರಮದಲ್ಲಿ ಸಂಯೋಜನೆಯನ್ನು ನೀಡಿದ್ದೀರಿ ಎಂಬುದರ ಬಗ್ಗೆ ಒಂದು ಕಾಲೇಜಿನ ಬಗ್ಗೆಯಾದರೂ ಮಾಹಿತಿಯನ್ನು ನೀಡಿ ಎಂದು ಕೇಳಿದರು.

ಪ್ರೊ. ಡಿ. ಆನಂದ್ ಅವರು ಮಾತನಾಡಿ ಸೇಫಿಯೆಂಟ್ ಕಾಲೇಜಿಗೆ ಹೊಸದಾಗಿ ಸಂಯೋಜನೆಯನ್ನು ನೀಡಿರುವುದಲ್ಲ, ಸಂಯೋಜನೆಯನ್ನು ಮುಂದುವರಿಸಿರುವುದು. ಕಾಲೇಜುಗಳ ಸಂಯೋಜನೆ ಮುಂದುವರಿಸಲು, ಹೊಸ ಕೋರ್ಸುಗಳು /ವಿಷಯಗಳು/ ಕಾಂಬಿನೇಷನ್‌ಗಳನ್ನು ಪ್ರಾರಂಭಿಸಲು/ ನವೀಕರಿಸಲು ಹಾಗೂ ಹಾಲಿ ಇರುವ ಕಾಲೇಜುಗಳಲ್ಲಿ ಶಾಶ್ವತ ಸಂಯೋಜನೆ ಕೋರಿರುವ ಕೋರ್ಸುಗಳಿಗೆ ಹೊಸದಾಗಿ ಶಾಶ್ವತ ಸಂಯೋಜನೆ ನೀಡಲು/ಸಂಪೂರ್ಣ ಶಾಶ್ವತ ಸಂಯೋಜನೆ ಹೊಂದಿರುವ ಕಾಲೇಜುಗಳನ್ನು ನವೀಕರಿಸಲು/ಶಿಕ್ಷಣ ಕಾಲೇಜುಗಳಿಗೆ ಸಂಯೋಜನೆ ಮುಂದುವರೆಸಲು ಹೀಗೆ 7-8 ಕಾರ್ಯಗಳಿರುತ್ತವೆ. ತನಿಖಾ ಸಮಿತಿಯವರು ಭೇಟಿ ನೀಡಿ ಪರಿಶೀಲಿಸಿ ವರದಿಯನ್ನು ನೀಡಿರುತ್ತಾರೆ. ಹೊಸದಾಗಿ ಕಾಲೇಜುಗಳನ್ನು ಪ್ರಾರಂಭಿಸುವಾಗ ಯುಯುಸಿಎಂಎಸ್ ಮುಖಾಂತರ ಅರ್ಜಿ ಸಲ್ಲಿಸಿದ ನಂತರ ಸಿಡಿಸಿಯ ಪೋರ್ಟಲ್‌ನಲ್ಲಿ ಶುಲ್ಕ ಪಾವತಿಸಿರುವುದನ್ನು, ಮೂಲಭೂತ ಸೌಕರ್ಯಗಳ ಮಾಹಿತಿಯನ್ನು ಸರ್ಕಾರಕ್ಕೆ ಕಳುಹಿಸಿದ ನಂತರ ಸರ್ಕಾರದ ಅನುಮೋದನೆ ದೊರೆತ

ನಂತರವೇ ಕಾಲೇಜುಗಳನ್ನು ಪ್ರಾರಂಭಿಸಲು ಅವಕಾಶ ನೀಡಲಾಗುತ್ತದೆ ಎಂದು ತಿಳಿಸಿದರು. ಜೊತೆಗೆ ಸೇಫಿಯೆಂಟ್ ಕಾಲೇಜಿಗೆ ಸಂಯೋಜನೆಯನ್ನು ಮುಂದುವರಿಸಲು ತನಿಖಾ ಸಮಿತಿಯು (ದಿನಾಂಕ : 27.05.2024 ರಿಂದ 09.06.2024ರೊಳಗೆ) ಭೇಟಿ ನೀಡಿ ಭೌತಿಕ ವಿಷಯದ ಬಗೆಗಿನ ವರದಿಯನ್ನು ನೀಡಿದ ನಂತರವೇ ಸಂಯೋಜನೆಯನ್ನು ಮುಂದುವರಿಸಲು ಸಿಂಡಿಕೇಟ್ ಸಭೆಗೆ ಮಂಡಿಸಲಾಗಿದೆ ಎಂದು ತಿಳಿಸಿದರು.

ಶ್ರೀ ಸಿ. ನಾಗರಾಜು ಅವರು ಮಾತನಾಡಿ ಕಾಲೇಜುಗಳಿಗೆ ಸಂಯೋಜನೆಯನ್ನು ನೀಡುವ ಸಂದರ್ಭದಲ್ಲಿ ಸಿಂಡಿಕೇಟ್ ಸದಸ್ಯರುಗಳು ಭೇಟಿ ನೀಡಲು ಅವಕಾಶ ಇದೆಯೇ ಇಲ್ಲವೇ ಎಂದು ಕೇಳಿದರು. ಇಲ್ಲವೆಂದಾದಲ್ಲಿ ದಾಖಲೆಯನ್ನು ನೀಡಬೇಕೆಂದು ಸಭೆಯಲ್ಲಿ ಕೇಳಿದರು.

ಪ್ರೊ. ಡಿ. ಆನಂದ್ ಅವರು ಮಾತನಾಡಿ ಸರ್ಕಾರದ ಆದೇಶದ ಪ್ರಕಾರ ಸಿಂಡಿಕೇಟ್ ಸದಸ್ಯರುಗಳನ್ನು ತನಿಖಾ ಸಮಿತಿಗೆ ಹಾಗೂ ಪರಾಮರ್ಶನ ಸಮಿತಿಗೆ ಸದಸ್ಯರುಗಳನ್ನಾಗಿ ಮಾಡಲು ಅವಕಾಶವಿರುವುದಿಲ್ಲವೆಂದು ತಿಳಿಸಿ, ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ: ಇಡಿ 94 ಯುಜಿವಿ 2022, ಬೆಂಗಳೂರು ದಿನಾಂಕ : 24.11.2022ಅನ್ನು ಸಭೆಗೆ ಓದಿ ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಕರ್ನಾಟಕ ಸರ್ಕಾರವು ಹೊರಡಿಸಿರುವ ಆದೇಶದ ಮೇಲೆ ಘನ ಉಚ್ಚ ನ್ಯಾಯಾಲಯವು ತಡೆಯಾಜ್ಞೆಯನ್ನು ನೀಡಿದೆ. ಹಾಗೆಯೇ 2018ರಲ್ಲೂ ಸರ್ಕಾರವು ಆದೇಶವನ್ನು ನೀಡಿತ್ತು. ಆ ಸಂದರ್ಭದಲ್ಲೂ ಉಚ್ಚನ್ಯಾಯಾಲಯವು ತಡೆಯಾಜ್ಞೆಯನ್ನು ನೀಡಿದೆ. 24.11.2022ರಲ್ಲಿ ಈ ಆದೇಶವನ್ನು ಘನ ಉಚ್ಚನ್ಯಾಯಾಲಯವು ವಜಾ ಮಾಡಿ, ತಡೆಯಾಜ್ಞೆಯನ್ನು ನೀಡಿದೆ. ತನಿಖಾ ಸಮಿತಿ ಸಭೆಗಳಿಗೆ ಸಿಂಡಿಕೇಟ್ ಸದಸ್ಯರನ್ನು ನಾಮನಿರ್ದೇಶನ ಮಾಡಬಹುದು ಇದಕ್ಕೆ ಸರ್ಕಾರವು ಮಧ್ಯಂತರ ಪ್ರವೇಶ ಮಾಡಬಾರದು ಎಂದು ಸ್ಪಷ್ಟ ಆದೇಶವನ್ನು ನೀಡಿದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಯಾವ ವಿಶ್ವವಿದ್ಯಾನಿಲಯದವರು ನ್ಯಾಯಾಲಯಕ್ಕೆ ಹೋಗಿದ್ದಾರೋ ಅವರಿಗೆ ಘನ ನ್ಯಾಯಾಲಯವು ಆದೇಶ ನೀಡಿರುತ್ತದೆ. ಈ ಸಂಬಂಧ ನಮ್ಮ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಮಾಹಿತಿ ಸರ್ಕಾರದಿಂದ ಬಂದಿರುವುದಿಲ್ಲ. ಹಾಗೂ ಸರ್ಕಾರದಿಂದ ಯಾವುದೇ ಸ್ಥಳೀಯ ತನಿಖಾ ಸಮಿತಿಗೆ ಸಿಂಡಿಕೇಟ್ ಸದಸ್ಯರುಗಳನ್ನು ನಾಮನಿರ್ದೇಶನ ಮಾಡುವಂತೆ ಆದೇಶವಾದಲ್ಲಿ ನಾಮನಿರ್ದೇಶನ ಮಾಡಲಾಗುವುದೆಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಸರ್ಕಾರದಿಂದ ಮರು ಆದೇಶವು ಬಂದಿಲ್ಲದ ಕಾರಣ, ನ್ಯಾಯಾಂಗದ ಆದೇಶವನ್ನು ಉಲ್ಲಂಘನೆ ಮಾಡಬಹುದೇ ಎಂದು ಕೇಳಿದರು. ಇದು ಮೈಸೂರು ವಿಶ್ವವಿದ್ಯಾನಿಲಯಕ್ಕೆ ನೀಡಿರುವಂತಹದ್ದಲ್ಲ ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಿಗೆ ನೀಡಿರುವಂತಹದ್ದು, ಜೊತೆಗೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಸ್ಥಳೀಯ ತನಿಖಾ ಸಮಿತಿಗೆ ಸಿಂಡಿಕೇಟ್ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಿಕೊಂಡಿದ್ದಾರೆ ಎಂಬುದಾಗಿ ತಿಳಿಸಿದರು. ಹೈಕೋರ್ಟ್ ಆದೇಶ ಸಂಖ್ಯೆ ರಿಟ್ ಪಿಟಿಷನ್ ನಂ. 5645/2022-23 ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಈ ವಿಶೇಷ ಸಿಂಡಿಕೇಟ್ ಸಭೆಯನ್ನು ಕರೆದಿರುವುದು ಕಾಲೇಜುಗಳಿಗೆ ಸಂಯೋಜನೆಯನ್ನು ನೀಡಿ ಸರ್ಕಾರಕ್ಕೆ ದಿನಾಂಕ: 15.06.2024ರೊಳಗೆ ಸಲ್ಲಿಸಬೇಕಾಗಿರುವುದರಿಂದ ಸಂಯೋಜನೆಗಳಿಗೆ ಅನುಮೋದನೆಯನ್ನು ನೀಡಲು ಕರೆಯಲಾಗಿದೆ ಎಂದು ತಿಳಿಸಿದರು. ಜೊತೆಗೆ ತಾವು ಒಂದು ವರ್ಷದಿಂದ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿದ್ದೀರಿ, ಹೋದ ವರ್ಷ ಕಾಲೇಜುಗಳಿಗೆ ಸಂಯೋಜನೆ ನೀಡುವಂತಹ ಸಿಂಡಿಕೇಟ್ ಸಭೆಯಲ್ಲಿ ತಾವು ಭಾಗವಹಿಸಿದ್ದೀರಿ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ ಕಾಲೇಜುಗಳಿಗೆ ಸಂಯೋಜನೆಯನ್ನು ನೀಡುವಂತಹ ಪ್ರಕ್ರಿಯೆಯು ಯುಯುಸಿಎಂಎಸ್‌ನಲ್ಲಿ ಮಾಡಲಾಗಿರುತ್ತದೆ. ಹೋದ ವರ್ಷವು ಸಹ ಸಿಂಡಿಕೇಟ್ ಸದಸ್ಯರುಗಳನ್ನು ಸ್ಥಳೀಯ ತನಿಖಾ ಸಮಿತಿಗೆ ನಾಮನಿರ್ದೇಶನ ಮಾಡಿರಲಿಲ್ಲ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು.

ಮಾನ್ಯ ಕುಲಪತಿಗಳು ಯುಯುಸಿಎಂಎಸ್ ಪೋರ್ಟಲ್‌ನಲ್ಲಿ ಓಪನ್ ಮಾಡಿ ಒಂದು ಕಾಲೇಜಿನ ಬಗೆಗಿನ ಮಾಹಿತಿಯನ್ನು ಸಭೆಯಲ್ಲಿ ತೋರಿಸಬೇಕೆಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್, ಶ್ರೀ ಗೋವರ್ಧನ್ ಗೋಕುಲ್ ರವರುಗಳು ಘನ ಉಚ್ಚನ್ಯಾಯಾಲಯದ ಆದೇಶವನ್ನು ಪಾಲಿಸಬೇಕು, ಜೊತೆಗೆ ಬೇರೆ ವಿಶ್ವವಿದ್ಯಾನಿಲಯಗಳಲ್ಲಿ ಈಗಾಗಲೇ ಸ್ಥಳೀಯ ತನಿಖಾ ಸಮಿತಿಗೆ ಸಿಂಡಿಕೇಟ್ ಸದಸ್ಯರುಗಳನ್ನು ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲಾಗಿದೆ ಎಂದು

ತಿಳಿಸಿದರು.

ಪ್ರೊ. ಡಿ. ಆನಂದ್ ಅವರು ಮಾತನಾಡಿ ಹಿಂದೆ ಇದ್ದಂತಹ ಕುಲಸಚಿವರು ಸಿಂಡಿಕೇಟ್ ಸದಸ್ಯರು ಹಾಗೂ ವಿದ್ಯಾವಿಷಯಕ ಪರಿಷತ್ ಸದಸ್ಯರುಗಳು ಸ್ಥಳೀಯ ತನಿಖಾ ಸಮಿತಿಗೆ ನಾಮನಿರ್ದೇಶನವನ್ನು ಮಾಡುವಂತೆ ಕೋರಿರುವ ಬಗ್ಗೆ ಪ್ರಧಾನ ಕಾರ್ಯದರ್ಶಿಗಳಿಗೆ ದಿನಾಂಕ 12.12.2022 ರಂದು ಪತ್ರವನ್ನು ಬರೆಯಲಾಗಿದೆ. ಆ ಪತ್ರಕ್ಕೆ ಪ್ರತಿಯಾಗಿ ಮೊದಲೇ ನೀಡಿದಂತಹ ಸುತ್ತೋಲೆಯನ್ನು ನೀಡಿರುತ್ತಾರೆ ಎಂದು ತಿಳಿಸಿದರು. ದಿನಾಂಕ 27.09.2023 ರಂದು ಸರ್ಕಾರಕ್ಕೆ ಪತ್ರವನ್ನು ಬರೆಯಲಾಗಿದೆ ಎಂದು ತಿಳಿಸಿದರು.

ಡಾ. ಸಿ. ಬಸವರಾಜು ರವರು ಮಾತನಾಡಿ ಈಗಾಗಲೇ ಎರಡು ವಿಷಯಗಳಿಗೆ ಸಿಂಡಿಕೇಟ್‌ನ ಅನುಮೋದನೆಯನ್ನು ಪಡೆಯಲಾಗಿದೆ ಎಂದು ತಿಳಿಸಿದ್ದೀರಿ. ಯಾವ ಯಾವ ವಿಷಯಗಳಿಗೆ ಅನುಮೋದನೆಯನ್ನು ಪಡೆಯಲಾಗಿದೆ ಹಾಗೂ ನಾವುಗಳು ಇಲ್ಲದಿದ್ದರೂ ಅನುಮೋದನೆಯನ್ನು ಪಡೆಯಬಹುದೇ ಎಂದು ಕೇಳಿದರು.

ಮಾನ್ಯ ಕುಲಪತಿಗಳು ಹಾಗೂ ಕುಲಸಚಿವರು ಮಾತನಾಡಿ ಕಾರ್ಯಸೂಚಿಯಲ್ಲಿರುವ ವಿಷಯ ಸಂಖ್ಯೆ: 1 ಹಾಗೂ ವಿಷಯ ಸಂಖ್ಯೆ : 4 ಕ್ಕೆ ಅನುಮೋದನೆಯನ್ನು ಪಡೆಯಲಾಗಿದೆ. ಕೋರಮ್ ಇದ್ದ ಕಾರಣ ಅನುಮೋದನೆಯನ್ನು ಪಡೆಯಲಾಗಿದೆ ಎಂದು ತಿಳಿಸಿದರು.

ಶ್ರೀ ಸಿ. ನಾಗರಾಜು ಅವರು ಮಾತನಾಡಿ, ಸ್ಥಳೀಯ ತನಿಖಾ ಸಮಿತಿಯವರು ಹಾಗೂ ಪರಾಮರ್ಶನ ಸಮಿತಿಯವರು ಒಂದೆರಡು ಕಾಲೇಜುಗಳಿಗೆ ಮಾತ್ರ ಭೇಟಿ ನೀಡಿರುತ್ತಾರೆ. ಜೊತೆಗೆ ಕಾಲೇಜುಗಳಲ್ಲಿ ಯಾವ ಯಾವ ಸೌಲಭ್ಯಗಳು ಇರಬೇಕು ಎಂಬುದು ನಮಗೆ ಹೇಗೆ ಗೊತ್ತಾಗುತ್ತದೆ. ಹಾಗೆಯೇ ನಮಗೆ ಸಂಪೂರ್ಣ ಮಾಹಿತಿ ಇಲ್ಲದೆ ಹೇಗೆ ಅನುಮೋದನೆ ನೀಡಲು ಸಾಧ್ಯ ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ ಯುಯುಸಿಎಂಎಸ್ ನ ಪೋರ್ಟಲ್ ನಲ್ಲಿ ಮಾಹಿತಿಯನ್ನು ಆಯಾಯ ಕಾಲೇಜಿನವರು ಅಪ್‌ಲೋಡ್ ಮಾಡಿರುತ್ತಾರೆ. ತದನಂತರ ಸರ್ಕಾರ ಸ್ಕೋರ್ ನೀಡುತ್ತದೆ.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಸ್ಪೆಷಲೈಸ್ಡ್ ಪ್ರೋಗ್ರಾಂಗಳಿಗೆ ರೆಕಗ್ನಿಷನ್‌ಗಾಗಿ ಸಿಂಡಿಕೇಟ್ ಸದಸ್ಯರುಗಳನ್ನು ನಾಮನಿರ್ದೇಶನ ಮಾಡುತ್ತೀರಿ, ಆದರೆ ಕಾಲೇಜುಗಳ ಸಂಯೋಜನೆಗೆ ನಮ್ಮನ್ನು ಯಾವ ಕಾರಣಕ್ಕಾಗಿ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡುತ್ತಿಲ್ಲ ಎಂದು ಕೇಳಿದರು.

ಪ್ರೊ. ಡಿ. ಆನಂದ್‌ರವರು ಮಾತನಾಡಿ ಕಾಲೇಜುಗಳಿಗೆ ಸಂಯೋಜನೆ ನೀಡುವಂತಹದ್ದು ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ನಡೆಯುವಂತಹದ್ದು. ಸ್ಪೆಷಲೈಸ್ಡ್ ಪ್ರೋಗ್ರಾಂಗಳು ನಮ್ಮ ವಿಶ್ವವಿದ್ಯಾನಿಲಯದ ಆಂತರಿಕ ಹಂತದಲ್ಲಿ ನಡೆಯುವಂತಹ ಪ್ರಕ್ರಿಯೆಗಳು. ಆದ್ದರಿಂದ ಸ್ಪೆಷಲೈಸ್ಡ್ ಪ್ರೋಗ್ರಾಂಗಳಿಗೆ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಲಾಗುವುದು ಎಂದು ತಿಳಿಸಿದರು. ಹಾಗೆಯೇ ಯುಯುಸಿಎಂಎಸ್‌ನ ಪೋರ್ಟಲ್ ಅನ್ನು ಸಿಂಡಿಕೇಟ್ ಸಭೆಯಲ್ಲಿ ಡಿಸ್‌ಪ್ಲೇ ಮಾಡಿ ಅಲ್ಲಿರುವಂತಹ ಮಾಹಿತಿಗಳ ಬಗ್ಗೆ ಸವಿವರವಾಗಿ ಸಭೆಗೆ ತಿಳಿಸಿದರು. ವಿಷಯ ತಜ್ಞರು, ಸಂಚಾಲಕರು ಹಾಗೂ ಆಯಾಯ ವಿಷಯಗಳ ಡೀನರುಗಳ ಮಾತ್ರ ಇರಲು ಯುಯುಸಿಎಂಎಸ್ ಪೋರ್ಟಲ್‌ನಲ್ಲಿ ಅವಕಾಶ ಮಾಡಿಕೊಡಲಾಗಿದೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಹಾಗೂ ಶ್ರೀ ಸಿ. ನಾಗರಾಜ ರವರುಗಳು ಮಾತನಾಡಿ ಮಂಗಳೂರು ವಿಶ್ವವಿದ್ಯಾಲಯದಲ್ಲಿ ಈಗಾಗಲೇ ಸಿಂಡಿಕೇಟ್ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಿಕೊಂಡು ಸಂಯೋಜನೆಯನ್ನು ನೀಡಿರುತ್ತಾರೆ. ಆದರೆ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಯಾಕೆ ಅವಕಾಶ ಮಾಡಿಕೊಟ್ಟಿಲ್ಲವೆಂದರು.

ಮಾನ್ಯ ಕುಲಪತಿಗಳು ಮಾತನಾಡಿ ಸರ್ಕಾರದಿಂದ ಆದೇಶವಾದಲ್ಲಿ ನಾವು ಸಹ ನಿಮ್ಮನ್ನು ಸದಸ್ಯರುಗಳನ್ನಾಗಿ ನಾಮನಿರ್ದೇಶನ ಮಾಡಲಾಗುವುದೆಂದು ತಿಳಿಸಿದರು.

ಸಿಂಡಿಕೇಟ್ ಸದಸ್ಯರುಗಳನ್ನು ಕಾಲೇಜುಗಳ ಸಂಯೋಜನಾ ವಿಷಯಕ್ಕೆ ಸಂಬಂಧಿಸಿದಂತೆ ಸ್ಥಳೀಯ ತನಿಖಾ ಸಮಿತಿಗೆ ಸದಸ್ಯರನ್ನಾಗಿ ಮಾಡದಿರುವ ಬಗ್ಗೆ ಸಿಂಡಿಕೇಟ್ ಸದಸ್ಯರುಗಳು ಸುದೀರ್ಘ ಚರ್ಚೆಯನ್ನು ನಡೆಸಿದರು.

ಮಾನ್ಯ ಕುಲಪತಿಗಳು ಸರ್ಕಾರದ ಆದೇಶದ ಪ್ರಕಾರ ಸದಸ್ಯರನ್ನು ನೇಮಕ ಮಾಡಲಾಗಿದೆ ಎಂದು ಸ್ಪಷ್ಟತೆಯನ್ನು ನೀಡಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಘನ ಉಚ್ಚ ನ್ಯಾಯಾಲಯದ ಆದೇಶದ

| | |
|---|---|
| | ಉಲ್ಲಂಘನೆಯಾಗಿದೆ ಎಂದು ತಿಳಿಸಿದರು.<br><br>ಶ್ರೀ ಮಹದೇಶು ಅವರು ಮಾತನಾಡಿ ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸಲು ಹೊಸ ಸಂಯೋಜನೆಗೆ ಶಿಫಾರಸು ಮಾಡಿರುವ 05 ಕಾಲೇಜುಗಳಿಗೆ 120 ಎಂಬಿಎ ಸೀಟುಗಳನ್ನು, 120 ಎಂಸಿಎ ಸೀಟುಗಳನ್ನು ನೀಡಿದ್ದೀರಿ, ಅವುಗಳಿಗೆಲ್ಲಾ ಮೂಲಭೂತ ಸೌಕರ್ಯ/ಅನುಕೂಲಗಳಿವೆಯೇ ಎಂದು ಕೇಳಿದರು.<br><br>ಪ್ರೊ. ಡಿ. ಆನಂದ್ ಅವರು ಮಾತನಾಡಿ ಯಾವುದೇ ಕಾಲೇಜಿನವರು ಹೊಸ ಕಾಲೇಜು/ಕೋರ್ಸುಗಳನ್ನು ಪ್ರಾರಂಭಿಸಲು ನಮಗೆ ಅರ್ಜಿಯನ್ನು ಸಲ್ಲಿಸುವ ಮೊದಲು AICTEಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಮೊದಲು AICTEಯವರು ಪರಿಶೀಲಿಸಿ ಅನುಮತಿಯನ್ನು ನೀಡಿರುತ್ತಾರೆ. AICTEಯವರು ಅನುಮತಿಯನ್ನು ನೀಡಿದ ನಂತರ ನಾವು 120 ಸೀಟುಗಳಿಗೆ ಸ್ಥಳಾವಕಾಶವಿದೆಯೇ ಎಂಬುದನ್ನು ಪರಿಶೀಲಿಸಿದ ನಂತರವೇ ಕೋರ್ಸುಗಳನ್ನು ಪ್ರಾರಂಭಿಸಲು ಅವಕಾಶ ನೀಡಲಾಗಿದೆ ಎಂದು ತಿಳಿಸಿದರು.<br><br>ಸಿಂಡಿಕೇಟ್ ಸದಸ್ಯರುಗಳು ಕೋರಿದ ಸೇಫಿಯೆಂಟ್ ಕಾಲೇಜಿನ ಮಾಹಿತಿಯನ್ನು ಯುಯುಸಿಎಂಎಸ್ ಪೋರ್ಟಲ್ ಮುಖಾಂತರ ಸದಸ್ಯರುಗಳಿಗೆ ತೋರಿಸಲಾಯಿತು.<br><br>ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ವಿಶ್ವವಿದ್ಯಾನಿಲಯದ ಕಾಲೇಜು ಅಭಿವೃದ್ಧಿ ಮಂಡಳಿಯಿಂದ ಸ್ಥಳೀಯ ತನಿಖಾ ಸಮಿತಿಯು ಕಾಲೇಜು ಪರಿಶೀಲನೆಗೆ ಹೋದಾಗ ಕೆಲವು ನ್ಯೂನತೆಗಳನ್ನು ಗಮನಿಸಿದಾಗ ಅವುಗಳ ಮಾಹಿತಿಯನ್ನು ಯಾವ ರೀತಿ ಆನ್‌ಲೈನ್‌ನಲ್ಲಿ ಸೇರ್ಪಡೆಗೊಳಿಸಿರುತ್ತಾರೆ ಎಂದು ಸಭೆಗೆ ಕೇಳಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಕಾಲೇಜಿಗೆ ಸಂಯೋಜನೆಯನ್ನು ನೀಡಲು Performance Index ನಲ್ಲಿ 100ಕ್ಕೆ 32 ಅಂಕಗಳು ಬೇಕಾಗುತ್ತದೆ. ಸಮಿತಿಯು ಪರಿಶೀಲನಾ ಸಮಯದಲ್ಲಿ ಯಾವ ಯಾವ ನ್ಯೂನತೆಗಳಿವೆಯೋ ಅವುಗಳೆಲ್ಲವನ್ನೂ Conditionsನಲ್ಲಿ ಹಾಕಿರುತ್ತಾರೆ. ಜೊತೆಗೆ ತನಿಖಾ ಸಮಿತಿಯು ಪರಿಶೀಲನಾ ಸಂದರ್ಭದಲ್ಲಿ ಸರಿಯಾಗಿ ಪರಿಶೀಲನೆ ಮಾಡಿಲ್ಲವೆಂದು ಯಾರಾದರೂ ತಕರಾರು ತಂದಾಗ ಆ ಸಮಿತಿಯನ್ನು ಮರು ರಚಿಸಿ ಬೇರೆ ತಂಡವನ್ನು ಕಳುಹಿಸಬಹುದು ಅಥವಾ ಕುಲಸಚಿವರು ಪರಿಶೀಲನೆಯನ್ನು ಮಾಡುತ್ತಾರೆ ಎಂದು ತಿಳಿಸಿದರು.<br><br>ಸುದೀರ್ಘ ಚರ್ಚೆಯ ನಂತರ ಪ್ರೊ. ಡಿ. ಆನಂದ್ ಅವರು ಮತ್ತೊಮ್ಮೆ ಯುಯುಸಿಎಂಎಸ್ ಬಗ್ಗೆ ಹಾಗೂ ಯುಯುಸಿಎಂಎಸ್ ಪೋರ್ಟಲ್ ಬರುವ ಮುಂಚೆ ಇದ್ದಂತಹ ಕಾಲೇಜುಗಳ ಸಂಯೋಜನೆ, ಹೊಸ ಕಾಲೇಜುಗಳ ಪ್ರಾರಂಭದ ಬಗ್ಗೆ ಹಾಗೂ ಇತರ ವಿಷಯಗಳನ್ನು ಸವಿವರವಾಗಿ ಸಭೆಯ ಗಮನಕ್ಕೆ ತಂದರು. ಜೊತೆಗೆ ಸರ್ಕಾರದಿಂದ ಬಂದ ಮಾಹಿತಿಯ ಆಧಾರದ ಮೇಲೆ ವಿಶ್ವವಿದ್ಯಾನಿಲಯವು ಸಮಿತಿಯನ್ನು ರಚಿಸಿ ಕಾಲೇಜುಗಳಿಗೆ ಭೇಟಿ ನೀಡಿ ತದನಂತರ ಸಿಡಿಸಿಯ ನಿರ್ದೇಶಕರು ಯುಯುಸಿಎಂಎಸ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಿದ ನಂತರ ವಿಶ್ವವಿದ್ಯಾನಿಲಯದ ಕುಲಸಚಿವರು ಅವರ ಲಾಗಿನ್ ನಲ್ಲಿ ಪರಿಶೀಲಿಸಿದ ನಂತರ ಸರ್ಕಾರದ ಉಪಕಾರ್ಯದರ್ಶಿಗಳಿಗೆ ಹೋದ ನಂತರ ಅವರು ಲಾಗಿನ್‌ಆಗಿ ಪರಿಶೀಲಿಸಿ, ಯಾವುದಾದರೂ ತಪ್ಪುಗಳು/ನ್ಯೂನ್ಯತೆಗಳು ಇದ್ದಲ್ಲಿ ಅನುಮೋದನೆ ದೊರಕುವುದಿಲ್ಲ, ಸರಿಯಿದ್ದಲ್ಲಿ ಅನುಮೋದನೆ ದೊರಕುತ್ತದೆ. ಪ್ರಸ್ತುತ ಸದರಿ ವಿಷಯವನ್ನು ಸಭೆಯ ಅನುಮೋದನೆ ಪಡೆದ ನಂತರ ಕುಲಸಚಿವರು ಲಾಗಿನ್ ಆಗಿ ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಸಭೆಯಿಂದ ಅನುಮೋದನೆ ದೊರೆತಿದೆ ಎಂದು ನಮೂದಿಸಿದ ನಂತರ ಸರ್ಕಾರಕ್ಕೆ ಕಳುಹಿಸಬೇಕಾಗುತ್ತದೆ. ನಂತರ ಅಮೋದನೆಯ ನಿರಾಕರಣೆ ಅಥವಾ ಒಪ್ಪಿಗೆ ದೊರೆತ ನಂತರವೇ ಕಾಲೇಜುಗಳಿಗೆ ನಾವು ಆದೇಶವನ್ನು ನೀಡುತ್ತೇವೆ ಎಂದು ಸುದೀರ್ಘವಾಗಿ, ಸಂಪೂರ್ಣವಾದ ಮಾಹಿತಿಯನ್ನು ಸಭೆಯ ಗಮನಕ್ಕೆ ತಂದರು.<br><br>ಪ್ರೊ. ಯಜ್ಞಮೂರ್ತಿ ಶ್ರೀಕಾಂತ್ ಅವರು ಮಾತನಾಡಿ, ಸ್ಥಳೀಯ ತನಿಖಾ ಸಮಿತಿ ಹಾಗೂ ಪರಾಮರ್ಶನ ಸಮಿತಿಯು ನೀಡಿರುವ ವರದಿಯಲ್ಲಿ ಏನಾದರೂ ನ್ಯೂನ್ಯತೆಗಳಿವೆ ಎಂದು ಕಂಡುಬಂದರೆ ಚರ್ಚಿಸಬಹುದು, ಸಿಂಡಿಕೇಟ್ ಸದಸ್ಯರನ್ನು ಸ್ಥಳೀಯ ತನಿಖಾ ಸಮಿತಿಗೆ ನಾಮನಿರ್ದೇಶನ ಮಾಡುವ ವಿಷಯವನ್ನು ತಾವುಗಳು ಒಂದು ಪತ್ರವನ್ನು ನೀಡಿ ಸರ್ಕಾರಕ್ಕೆ ಕಳುಹಿಸಿ, ಸರ್ಕಾರದ ಆದೇಶದ ಮೇರೆಗೆ ನಾಮನಿರ್ದೇಶನವನ್ನು ಮಾಡುವ ಪ್ರಕ್ರಿಯೆಯನ್ನು ವಿಶ್ವವಿದ್ಯಾನಿಲಯಕ್ಕೆ ಬಿಡುವುದು ಸರಿಯೆಂದು ತಿಳಿಸಿದರು.<br><br>ಡಾ. ಆಂಥೋನಿಯವರು ಮಾತನಾಡಿ ಯುಯುಸಿಎಂಎಸ್‌ನಲ್ಲಿ ಮಾರ್ಕ್ಸ್‌ಕಾರ್ಡ್ ಸರಿಯಾದ |

ಸಮಯಕ್ಕೆ ದೊರಕುತ್ತಿಲ್ಲ. ಮಾರ್ಕ್ಸ್‌ಕಾರ್ಡ್ ಬಂದಿಲ್ಲದವರನ್ನು ನೇಮಕ ಮಾಡಿಕೊಂಡಿದ್ದೇವೆ. ಸಮಿತಿಯವರು ಬಂದು ಯಾವ ರೀತಿ ನೇಮಕ ಮಾಡಿಕೊಂಡಿದ್ದೀರಿ ಎಂದು ಕೇಳುತ್ತಾರೆ. ಸಿಡಿಸಿಯಿಂದ ಕೇಳುವ ಪ್ರಶ್ನೆ/ಕ್ವೈರಿಗಳಿಗೆ 15 ದಿನಗಳೊಳಗಾಗಿ ಉತ್ತರವನ್ನು ನಾವು ನೀಡಲೇಬೇಕಾಗುತ್ತದೆ. ಯುಯುಸಿಎಂಎಸ್ ಬಂದ ನಂತರ ವಿಶ್ವವಿದ್ಯಾನಿಲಯದ ಪಾತ್ರ ಶೇ.80 ರಷ್ಟು ಕಡಿಮೆಯಾಗಿದೆ. ಜೊತೆಗೆ ಯುಯುಸಿಎಂಎಸ್ ಬೇಡ ಎಂದು ಪ್ರೆಸ್ ಮೀಟ್ ಸಹ ಮಾಡಿದ್ದೇವೆ. ಯುಯುಸಿಎಂಎಸ್‌ನಿಂದ ನಿಗದಿತ ಸಮಯಕ್ಕೆ ಮಾರ್ಕ್ಸ್‌ಕಾರ್ಡ್ ದೊರಕುತ್ತಿಲ್ಲ, ಶುಲ್ಕವನ್ನು ಪಾವತಿಸಲು ಕೂಡ ಸಾಧ್ಯವಾಗುತ್ತಿಲ್ಲ. ಹಾಗೆಯೇ ಯಾವುದೋ ಕಾಲೇಜಿನವರಿಗೆ ರೂ.72.00 ಲಕ್ಷಗಳ ಶುಲ್ಕವನ್ನು ಪಾವತಿಸಲು ಬಂದಿದೆ. ಕಟ್ಟಬೇಕಾಗಿದ್ದ ಮೊತ್ತ ರೂ.2.50ಗಳು ಮಾತ್ರ. ಆದ್ದರಿಂದ ಯುಯುಸಿಎಂಎಸ್‌ನಿಂದ ಅನೇಕ ಗೊಂದಲುಗಳುಂಟಾಗಿವೆ ಎಂದು ಸಭೆಯ ಗಮನಕ್ಕೆ ತಂದರು.

ಪ್ರೊ. ಡಿ. ಆನಂದ್ ಅವರು ಮಾತನಾಡಿ, ಸರ್ಕಾರದ ಮಟ್ಟದಲ್ಲೇ ಆನ್‌ಲೈನ್ ಮುಖಾಂತರ ವಿಡಿಯೋ ಮುಖಾಂತರ ಎಲ್ಲಾ ಮೂಲಭೂತ ಸೌಕರ್ಯಗಳು, ಕಟ್ಟಡಗಳು ಇವುಗಳನ್ನೆಲ್ಲಾ ಪರಿಶೀಲಿಸಿರುತ್ತಾರೆ. ತದನಂತರ ನಾವು ಭೇಟಿ ನೀಡಿದ ಸಂದರ್ಭದಲ್ಲಿ ಕೆಲವೊಂದು ನ್ಯೂನ್ಯತೆಗಳಿದ್ದಲ್ಲಿ ಸರಿಪಡಿಸಿಕೊಳ್ಳಲು ಸಹ ತಿಳಿಸಲಾಗಿರುತ್ತದೆ. ಜೊತೆಗೆ ಆನ್‌ಲೈನ್ ಸಂಯೋಜನಾ ಕಾರ್ಯ ಪ್ರಾರಂಭವಾದಾಗಿನಿಂದ ವಿಶ್ವವಿದ್ಯಾನಿಲಯದ ಪಾತ್ರ ಶೇ.80 ರಷ್ಟು ಕಡಿಮೆಯಾಗಿದೆ ಎಂದು ಸಭೆಯ ಗಮನಕ್ಕೆ ತಂದರು.

ಡಾ. ಮುಜೀದಾಬಾನು ಹಾಗೂ ಪ್ರೊ. ಯಜ್ಞಮೂರ್ತಿ ಶ್ರೀಕಾಂತ್ ಅವರು ನಾವು ವಿಡಿಯೋ ಮುಖಾಂತರ ಕಾಲೇಜನ್ನು ತೋರಿಸುವಾಗ, ತಪ್ಪುತಪ್ಪಾಗಿ ಮಾಹಿತಿಯನ್ನು ನೀಡಲು ಬರುವುದಿಲ್ಲ. ಅದರಲ್ಲಿ ಸಮಯ, ಅಳತೆ ಎಲ್ಲವನ್ನು ಸಹ ತೋರಿಸುತ್ತದೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಸಿಂಡಿಕೇಟ್‌ನಲ್ಲಿ ಸಂಪೂರ್ಣ ಮಾಹಿತಿಯಿಲ್ಲದೆ, ಕಾಲೇಜಿನ ಸಂಯೋಜನೆ ಅನುಮೋದನೆಯನ್ನು ಕೊಡುವುದಕ್ಕೆ ಬರುವುದಿಲ್ಲ, ಹಾಗೆಯೇ ಘನ ಉಚ್ಚ ನ್ಯಾಯಾಲಯವು ನೀಡಿರುವ ತಡೆಯಾಜ್ಞೆಗೂ ಯಾವುದೇ ಸಮಂಜಸವಾದ ಪ್ರತಿಕ್ರಿಯೆ ದೊರಕುತ್ತಿಲ್ಲವೆಂದು ಸಭೆಗೆ ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಉಚ್ಚ ನ್ಯಾಯಾಲಯದಿಂದ ಬಂದಿರುವ ತಡೆಯಾಜ್ಞೆ ಆದೇಶದ ವಿಷಯವನ್ನು ಮುಂದಿನ ಸಭೆಯಲ್ಲಿ ಮಾತಾಡಬಹುದು. ಈ ದಿನ ವಿಶೇಷ ಸಭೆಯನ್ನು ಕರೆದಿರುವುದು 1) ಕಾಲೇಜುಗಳಿಗೆ ಸಂಯೋಜನೆಯ ಅನುಮೋದನೆಗಾಗಿ. ಈ ವಿಷಯವು ದಿನಾಂಕ 11.6.2024 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಲಾಗಿ, ಸಭೆಯ ಅನುಮೋದನೆಯು ದೊರೆತಿದೆ. ಸರ್ಕಾರಕ್ಕೂ ಕಳುಹಿಸಲಾಗಿದೆ. ಕಳೆದ ಬಾರಿ ವಿಶ್ವವಿದ್ಯಾನಿಲಯವು 45 ಕಾಲೇಜುಗಳಿಗೆ ಹೊಸ ಕೋರ್ಸ್ ಪ್ರಾರಂಭಿಸಲು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸಂಯೋಜನೆಯನ್ನು ನೇರವಾಗಿ ಸರ್ಕಾರವೇ ನೀಡಿದೆ, ವಿಶ್ವವಿದ್ಯಾನಿಲಯದಿಂದ ಯಾವುದೇ ಕಾಲೇಜುಗಳಿಗೆ ಭೇಟಿ ನೀಡಿರಲಿಲ್ಲ. ಈಗಾಗಲೇ ಸರ್ಕಾರವು ಆನ್‌ಲೈನ್ ಮುಖಾಂತರ ತನ್ನ ಪ್ರಕ್ರಿಯೆಯನ್ನು ಮಾಡಿದೆ. ಜೊತೆಗೆ ವಿಶ್ವವಿದ್ಯಾನಿಲಯದಿಂದ ಸ್ಥಳೀಯ ತನಿಖಾ ಸಮಿತಿ ಹಾಗೂ ಪರಾಮರ್ಶನ ಸಮಿತಿಯು ಭೇಟಿ ನೀಡಿ, ನೀಡಿರುವ ವರದಿಯನ್ನು ಸಭೆಯ ಗಮನಕ್ಕೆ ತರಲಾಗಿದೆ. ಇದು ವರ್ಷಕ್ಕೊಂದು ಬಾರಿ ನಡೆಯುವಂತಹ ಪ್ರಕ್ರಿಯೆಗಳು. ತಮಗೇನಾದರೂ ಕಾಲೇಜುಗಳ ಸಂಯೋಜನೆ ನೀಡಿರುವುದರಲ್ಲಿ ಯಾವುದೇ ನ್ಯೂನತೆಗಳು ಕಂಡುಬಂದು ತಿಳಿಸಿದ್ದಲ್ಲಿ, ಅವುಗಳಿಗೆ ಮರು ಸಮಿತಿಯನ್ನು ರಚಿಸಿ, ಮರು ಪರಿಶೀಲನೆಗೆ ಸಮಿತಿಗಳನ್ನು ಕಳುಹಿಸಿ ವರದಿಯನ್ನು ಸಲ್ಲಿಸಲಾಗುವುದೆಂದು. 3-4 ವರ್ಷಗಳಿಂದ ಕಾಲೇಜುಗಳಿಗೆ ಮರುಪರೀಶಿಲನೆ ಮಾಡಿರುವುದಿಲ್ಲ. ಯುಯುಸಿಎಂಎಸ್ ಬಂದಿರುವ ಕಾರಣ ಕೆಲಸವನ್ನು ಕಡಿಮೆ ಮಾಡುವುದಕ್ಕೋಸ್ಕರ. ಹೊಸ ಕಾಲೇಜುಗಳ ಅನುಮೋದನೆಗಾಗಿ ಯಾವ ವಿಷಯವು ಬಂದಿಲ್ಲ, ಕೋರ್ಸುಗಳಿಗಾಗಿ ಬಂದಿದೆ ಅದು AICTEಯ ಅನುಮೋದನೆ ದೊರೆತ ನಂತರವೇ ನಾವು ಕೊಡುವಂತಹದ್ದು, ವಿಶ್ವವಿದ್ಯಾನಿಲಯದ ವತಿಯಿಂದ ನೀಡುವಂತಹ ಯಾವುದೇ ಕೋರ್ಸುಗಳನ್ನು ಕಾಲೇಜುಗಳು ಕೇಳಿಲ್ಲವೆಂಬ ಮಾಹಿತಿಯನ್ನೂ ಸಹ ಸಭೆಗೆ ತಿಳಿಸಿದರು. ಇದೊಂದು ಸಂವಿಧಾನಾತ್ಮಕ ಪ್ರಕ್ರಿಯೆ. ವಿಶ್ವವಿದ್ಯಾನಿಲಯವು ಅನುಮೋದನೆಯನ್ನು ನೀಡಬೇಕಾಗುತ್ತದೆ. ನೀಡದಿದ್ದಲ್ಲಿ ಸರ್ಕಾರವನ್ನು ಹಿಂದಿಕ್ಕಿದಂತಾಗುತ್ತದೆ ಎಂದು ತಿಳಿಸಿದರು.

ಸುದೀರ್ಘ ಚರ್ಚೆಯ ನಂತರ ಡಾ. ಟಿ.ಆರ್. ಚಂದ್ರಶೇಖರ್ ಹಾಗೂ ಡಾ. ಬಸವರಾಜು ಸಿ. ಅವರುಗಳು ಮಾತನಾಡಿ ಸಂಯೋಜನೆಯನ್ನು ನೀಡುವಾಗ ಯಾವ ಯಾವ ಮಾನದಂಡಗಳನ್ನು ಅನುಸರಿಸುತ್ತೀರಿ ಎಂಬುದರ ಬಗೆಗಿನ ಮಾಹಿತಿಯನ್ನು ನೀಡುವಂತೆ ಕೋರಿದರು.

| | |
|---|---|
| | ಪ್ರೊ. ಆನಂದ್ ಡಿ. ಅವರು ಕಾಲೇಜುಗಳ ಸಂಯೋಜನೆಗೆ ಸಂಬಂಧಿಸಿದ ಮಾಹಿತಿಯನ್ನು ಆನ್‌ಲೈನ್ ಮುಖಾಂತರ ಸಭೆಗೆ ತೋರಿಸಲು ವ್ಯವಸ್ಥೆ ಮಾಡಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಹಾಗೂ ಡಾ. ಸಿ. ಬಸವರಾಜು ಅವರುಗಳು ಮಾನ್ಯ ಅಧ್ಯಕ್ಷರಿಗೆ ಕಾಲೇಜುಗಳ ಸಂಯೋಜನೆಗೆ ಸಂಬಂಧಿಸಿದಂತೆ ಮನವಿಯನ್ನು ಸಲ್ಲಿಸೋಣವೆಂದರು.<br><br>ಪ್ರೊ. ಯಜ್ಞಮೂರ್ತಿ ಶ್ರೀಕಾಂತ್ ಅವರು ಮಾತನಾಡಿ ವಿಶ್ವವಿದ್ಯಾನಿಲಯ ಹಾಗೂ ಅಧಿಕಾರಿಗಳು ನೀಡುವಂತಹ ವರದಿಯನ್ನು ನಾವು ಅನುಮೋದನೆಯನ್ನು ಮಾಡಬೇಕಾಗುತ್ತದೆ. ಕಾರಣ ನಾವು ಸಿಂಡಿಕೇಟ್‌ನ ಸದಸ್ಯರುಗಳೆಲ್ಲರೂ 101 ಕಾಲೇಜುಗಳ ಪೂರ್ಣ ಮಾಹಿತಿಯನ್ನು ಖುದ್ದಾಗಿ ಹೋಗಿ ಪಡೆಯಲು ಸಾಧ್ಯವಾಗುವುದಿಲ್ಲ. ವಿಶ್ವವಿದ್ಯಾನಿಲಯವು ಸುಲಲಿತವಾಗಿ ಹಾಗೂ ಸಹಕಾರ ಮನೋಭಾವದಿಂದ ನಡೆಯಬೇಕಾಗುತ್ತದೆ. ಜೊತೆಗೆ ದಿನಾಂಕ : 11.06.2024ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಅನುಮೋದನೆ ದೊರಕಿದೆ. ಆದ್ದರಿಂದ ಸಿಂಡಿಕೇಟ್ ಸದಸ್ಯರುಗಳಾದ ನಾವುಗಳು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಚಟುವಟಿಕೆಯು ಸುಲಲಿತವಾಗಿ ನಡೆಯುವ ಉದ್ದೇಶದಿಂದ ಅನುಮೋದನೆ ನೀಡುವುದು ಒಳಿತು ಎಂದು ಹಾಗೂ ಈಗಾಗಲೇ ಆಯವ್ಯಯ ಅಂದಾಜಿಗೆ ಸಂಬಂಧಿಸಿದಂತೆ ಹಣಕಾಸು ಸಮಿತಿಯು ಅನುಮೋದನೆ ನೀಡುವುದರಿಂದ ಆಯವ್ಯಯವನ್ನು ಪರಿಶೀಲಿಸಿ ಅನುಮೋದನೆಯನ್ನು ನೀಡಬಹುದು ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ. ನಾನು ಸಭೆಯ ಅಧ್ಯಕ್ಷನಾಗಿ ಕಾಲೇಜುಗಳಿಗೆ ಸಂಯೋಜನೆಯನ್ನು ನೀಡಲು ಸಿಂಡಿಕೇಟ್ ಸಭೆಯು ಅನುಮೋದಿಸಿದೆ ಎಂದು ಸರ್ಕಾರಕ್ಕೆ ಕಳುಹಿಸಲಾಗುವುದು. ಸಿಂಡಿಕೇಟ್ ಸದಸ್ಯರುಗಳಾದ ತಾವುಗಳು ಒಪ್ಪಿಗೆ ಇಲ್ಲವೆಂದು ಪತ್ರ ನೀಡುವುದಾದರೆ ನೀಡಬಹುದು ಎಂದು ತಿಳಿಸಿ. ಈ ಸಂಯೋಜನಾ ಕೆಲಸವು ಸರ್ಕಾರಕ್ಕೆ ಸಂಬಂಧಿಸಿದ್ದಾಗಿದ್ದು, ಕಾಲೇಜುಗಳ ಸಂಯೋಜನೆಯನ್ನು ನೀಡಬೇಕಾಗಿರುವುದು ನಮ್ಮ ಕರ್ತವ್ಯವಾಗಿರುತ್ತದೆ. ಈಗಾಗಲೇ ವಿಷಯ ಸಂಖ್ಯೆ 1 ಹಾಗೂ ವಿಷಯ ಸಂಖ್ಯೆ 4ರ ವಿಷಯದ ಅನುಮೋದನೆಯನ್ನು ಸರ್ಕಾರಕ್ಕೆ ಕಳುಹಿಸಲಾಗುವುದು ಎಂದು ತಿಳಿಸಿದರು.<br><br>ಪ್ರೊ. ಡಿ. ಆನಂದ್ ಅವರು ಮಾತನಾಡಿ. ಮತ್ತೊಮ್ಮೆ ಎಸ್.ವಿ.ಇ.ಐ ಪ್ರಥಮ ದರ್ಜೆ ಕಾಲೇಜು 2013ರಲ್ಲೇ ಕಾರ್ಯವನ್ನು ಸ್ಥಗಿತಗೊಳಿಸಿರುವುದನ್ನು ಹಾಗೆಯೇ ಕಾಲೇಜನ್ನು ಪ್ರಾರಂಭಿಸುವ ಬಗೆಗೆ ಹಲವಾರು ಪ್ರಕ್ರಿಯೆಗಳಿರುತ್ತವೆಯೋ ಹಾಗೆಯೇ ಕಾಲೇಜನ್ನು ಮುಚ್ಚುವ ಸಂದರ್ಭದಲ್ಲಿ ಹಲವು ಪ್ರಕ್ರಿಯೆಗಳನ್ನು ಅನುಸರಿಸಬೇಕಾಗುತ್ತದೆ ಎಂಬುದರ ವಿಷಯವನ್ನು ಸಿಂಡಿಕೇಟ್ ಸಭೆಗೆ ವಿವರಿಸಿದರು. |
| **ವಿಶೇಷ ಸಭೆ I.2** | 2023-24ನೇ ಸಾಲಿನ ವಿವಿಯ ಆಯವ್ಯಯ ಅಂದಾಜುಗಳಲ್ಲಿ ಪರಿಷ್ಕರಿಸಿರುವುದನ್ನು "ಸಿಂಡಿಕೇಟ್" ಸಭೆಯ ಅನುಮೋದನೆಗಾಗಿ. |
| **ತೀರ್ಮಾನ** | ಮುಂದೂಡಲಾಯಿತು |
| **ವಿಶೇಷ ಸಭೆ I.3** | 2024-25ನೇ ಆರ್ಥಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜುಗಳ "ಕರಡು" ಪಟ್ಟಿಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ. |
| **ತೀರ್ಮಾನ** | ಮುಂದೂಡಲಾಯಿತು. |
| **ವಿಶೇಷ ಸಭೆ I.4** | ಎಸ್.ವಿ.ಇ.ಐ ಪ್ರಥಮ ದರ್ಜೆ ಕಾಲೇಜನ್ನು ಮುಚ್ಚುವ ಬಗ್ಗೆ. |
| | ಪ್ರೊ. ಡಿ. ಆನಂದ್ ಅವರು ಮಾತನಾಡಿ. ಎಸ್.ವಿ.ಇ.ಐ ಪ್ರಥಮ ದರ್ಜೆ ಕಾಲೇಜನ್ನು ಮುಚ್ಚುವ ಸಲುವಾಗಿ ಕಾಲೇಜು ಅಭಿವೃದ್ಧಿ ಮಂಡಳಿಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ನಿಯಮಾನುಸಾರ ಯಾವುದೇ ಕಾಲೇಜು ಮುಚ್ಚುವ ಮುನ್ನ ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಅನುಮೋದನೆಯನ್ನು ಪಡೆದು ಸರ್ಕಾರಕ್ಕೆ ಸಲ್ಲಿಸಬೇಕು. ಸರ್ಕಾರದಿಂದ ವರದಿ ಬಂದ ನಂತರ ಅವರಿಗೆ ಮಾಹಿತಿಯನ್ನು ನೀಡುವುದು. ಈ ಕಾಲೇಜಿನವರು ಸುಮಾರು 2013ನೇ ಸಾಲಿನವರೆಗೂ ಕಾರ್ಯನಿರ್ವಹಿಸುತ್ತಿದ್ದು, 2013ರ ಸಾಲಿನಲ್ಲಿ ತನ್ನ ಕಾರ್ಯವನ್ನು ಆರ್ಥಿಕ ಮುಗ್ಗಟ್ಟಿನ ಕಾರಣದಿಂದಾಗಿ ಮುಕ್ತಾಯಗೊಳಿಸಿರುತ್ತಾರೆ. ಆದರೆ. ಮುಕ್ತಾಯಗೊಳಿಸುವ ಸಂದರ್ಭದಲ್ಲಿ ಸೂಕ್ತವಾದ ಪ್ರಕ್ರಿಯೆಯನ್ನು |

| | |
|---|---|
| | ಅನುಸರಿಸಿರುವುದಿಲ್ಲ. ಕಾನೂನಿನ ರೀತ್ಯಾ ಹಾಗೂ ವಿಶ್ವವಿದ್ಯಾನಿಲಯಕ್ಕೂ ಸಂಪೂರ್ಣ ಮಾಹಿತಿಯನ್ನು ಒದಗಿಸದೆ ಕಾಲೇಜನ್ನು ಸ್ಥಗಿತಗೊಳಸಿರುತ್ತಾರೆ. ತದನಂತರದಲ್ಲಿ 2023-24ನೇ ಸಾಲಿನಲ್ಲಿ ಕಾಲೇಜನ್ನು ಮುಕ್ತಾಯಗೊಳಸಿರುವುದಕ್ಕೆ ಪ್ರಮಾಣ ಪತ್ರವನ್ನು ಕೋರಿರುತ್ತಾರೆ. ಆದರೆ. ಯಾವುದೇ ಕಾಲೇಜನ್ನು ಮುಕ್ತಾಯಗೊಳಸಬೇಕಾದಲ್ಲಿ ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳಲ್ಲಿ ಮಂಡಿಸಿ, ತದನಂತರ ವರದಿಯನ್ನು ಸರ್ಕಾರಕ್ಕೆ ಕಳುಹಿಸಿ, ಸರ್ಕಾರದಿಂದ ಬಂದಂತಹ ಆದೇಶವನ್ನು ನಾವು ಸದರಿ ಕಾಲೇಜಿನವರಿಗೆ ಕಳುಹಿಸಬೇಕಾಗುತ್ತದೆ ಎಂದು ತಿಳಸಿದರು.<br><br>ಈ ಎಲ್ಲಾ ವಿಷಯಗಳನ್ನು ಸದರಿ ಕಾಲೇಜಿನವರಿಗೆ ಮನವರಿಕೆ ಮಾಡಿದ ನಂತರ, ದಿನಾಂಕ: 21-01-2023ರಂದು ನಡೆದಿದೆ ಎನ್ನಲಾದ ಕಾಲೇಜಿನ ಆಡಳತ ಮಂಡಳಯ ನಡವಳಯನ್ನು ಕಳುಹಿಸಿರುತ್ತಾರೆ. ಈ ವಿಷಯವನ್ನು ಸಭೆಯು ಅನುಮೋದಿಸಿದ್ದಲ್ಲಿ, ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಈ ಮಾಹಿತಿಯನ್ನು ಸಲ್ಲಿಸಲಾಗುವುದೆಂದು ತಿಳಸಿದರು.<br><br>ಪ್ರೊ. ಶಬ್ಬೀರ್ ಮೊಹಮ್ಮದ್ ಮುಸ್ತಫ ಅವರು ಮಾತನಾಡಿ, ಕಾಲೇಜುಗಳಗೆ ಸಂಯೋಜನೆ ನೀಡುವ ಸಂದರ್ಭದಲ್ಲಿ ಒಟ್ಟು 84 ಕಾಲೇಜುಗಳಗೆ ಭೇಟಿ ನೀಡುವ ಸಂದರ್ಭದಲ್ಲಿ ತುರ್ತು-ತುರ್ತಾಗಿ ಭೇಟಿ ನೀಡಿ ಅಲ್ಲಿನ ಕಾಲೇಜಿನ ಶೈಕ್ಷಣಿಕ ವಿಚಾರವಾಗಿ, ಮ್ಯಾನೇಜ್‌ಮೆಂಟ್ ಹಾಗೂ ಕಛೇರಿಯ ಬಗೆಗೂ ನಾವು ಮಾಹಿತಿಯನ್ನು ಪಡೆಯಬೇಕಾಗುತ್ತದೆ. ಒಟ್ಟಿಗೆ ನಾವು 6-6 ಕಾಲೇಜುಗಳಗೆ ಭೇಟಿ ನೀಡಿದಾಗ ಮೂಲಭೂತ ಸೌಕರ್ಯಗಳ ಬಗ್ಗೆ ಕೂಲಂಕಷವಾಗಿ ಪರಿಗಣಿಸಲು ಸಾಧ್ಯವಾಗುವುದಿಲ್ಲ ಎಂದು ಸಭೆಗೆ ತಿಳಸಿದರು.<br><br>ಪ್ರೊ. ಡಿ. ಆನಂದ್ ರವರು ಮಾತನಾಡಿ, ಸರ್ಕಾರವು ನಿಗದಿತ ದಿನಾಂಕದೊಳಗೆ ವರದಿಯನ್ನು ಸಲ್ಲಿಸಬೇಕಾಗಿರುವುದರಿಂದ, ಹಾಗೂ ಆನ್‌ಲೈನ್‌ನಲ್ಲಿ ಪ್ರಕ್ರಿಯೆಗಳನ್ನು ಮುಗಿಸಬೇಕಾಗಿರುವುದರಿಂದಲೂ ನಮಗೆ ಕೆಲವು ತೊಂದರೆಗಳಾಗುತ್ತಿವೆ. ಜೊತೆಗೆ ಶಾಶ್ವತ ಸಂಯೋಜನೆಯನ್ನು ನೀಡುವ ಕಾಲೇಜುಗಳ ವಿವರವನ್ನು ಬೇರೆ ಸಾಫ್ಟ್‌ವೇರ್‌ನಲ್ಲಿ ಅಪ್‌ಲೋಡ್ ಮಾಡಿ ಎಂದು ಮಾಹಿತಿಯು ಬಂದಿದ್ದು, ಇಂದು ಬೆಳಗ್ಗೆ ಅದರ ಬಗ್ಗೆ ಡೆಮಾನ್‌ಸ್ಟ್ರೇಷನ್ ನೀಡಿದ್ದಾರೆ. ಆದರೆ ಈಗಾಗಲೇ ಸಂಯೋಜನೆಯ ಎಲ್ಲಾ ಪ್ರಕ್ರಿಯೆಗಳನ್ನು ಮುಗಿಸಿ ವಿದ್ಯಾವಿಷಯಕ ಪರಿಷತ್ ಹಾಗೂ ಸಿಂಡಿಕೇಟ್ ಸಭೆಗೆ ಮಂಡಿಸಲಾಗಿದೆ. ಆದರೆ ಈಗ ಮತ್ತೊಮ್ಮೆ ಎಲ್ಲಾ ಪ್ರಕ್ರಿಯೆಗಳನ್ನು ಮತ್ತೊಮ್ಮೆ ಮಾಡಬೇಕಾಗುತ್ತದೆ ಎಂದು ತಿಳಸಿದರು.<br><br>ನಂತರ ಮಾನ್ಯ ಕುಲಪತಿಗಳು ಮಾತನಾಡಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ನವರು ಕಾಲೇಜಿನ ವಿವರ, ಡೇಟಾ, ಬಿಲ್ಡಿಂಗ್, ಹಾಗೂ ಮೂಲಭೂತ ಸೌಕರ್ಯಗಳ ಎಲ್ಲಾ ಮಾಹಿತಿಯನ್ನು ಆನ್‌ಲೈನ್‌ನಲ್ಲೇ ತುಂಬಾಬೇಕಾಗಿರುತ್ತದೆ ಎಂದು ತಿಳಸಿದರು.<br><br>ಪ್ರೊ. ಶಬ್ಬೀರ್ ಮೊಹಮ್ಮದ್ ಮುಸ್ತಾಫ ಅವರು ಮಾತನಾಡಿ ಎರಡು ಕಾಲೇಜುಗಳ ಸಂಯೋಜನೆಯನ್ನು ರದ್ದುಪಡಿಸುವುದಕ್ಕೆ ಕೋರಿರುತ್ತಾರೆ ಎಂದು ತಿಳಸಿದ್ದೀರಿ. ಅದರಲ್ಲಿ ನೃಪತುಂಗ ಕಾಲೇಜು ಹೋದ ವರ್ಷ ಪ್ರಾರಂಭವಾಗಿದ್ದು, ಕಾಲೇಜನ್ನು ರದ್ದುಪಡಿಸುವುದಕ್ಕೆ ಕಾರಣವೇನಿರಬಹುದೆಂದು ಸಭೆಯಲ್ಲಿ ಕೇಳದರು.<br><br>ಪ್ರೊ. ಡಿ. ಆನಂದ್ ರವರು ಮಾತನಾಡಿ ಪ್ರವೇಶಾತಿ ಬರದೇ ಇರುವುದು ಹಾಗೆಯೇ ಆರ್ಥಿಕ ಮುಗ್ಗಟ್ಟಿನ ಕಾರಣದಿಂದ ಕಾಲೇಜಿನ ಸಂಯೋಜನೆಯನ್ನು ರದ್ದುಪಡಿಸಲು ಕೋರಿರುತ್ತಾರೆ ಎಂದು ತಿಳಸಿದರು. |
| **ತೀರ್ಮಾನ** | ಎಸ್.ವಿ.ಇ.ಐ ಪ್ರಥಮ ದರ್ಜೆ ಕಾಲೇಜು 2013ನೇ ಸಾಲಿನಿಂದ ಸ್ಥಗಿತಗೊಳಸಿರುವುದನ್ನು ಗಮನಿಸಿದ ಸಭೆಯು ಎಸ್.ವಿ.ಇ.ಐ ಪ್ರಥಮ ದರ್ಜೆ ಕಾಲೇಜನ್ನು ಮುಚ್ಚುವುದಕ್ಕೆ ಅನುಮೋದಿಸಿದ ಸಿಂಡಿಕೇಟ್ ಸಭೆಯು ಈ ಮಾಹಿತಿಯನ್ನು ಸರ್ಕಾರಕ್ಕೆ ಸಲ್ಲಿಸಲು ತೀರ್ಮಾನಿಸಿತು. |

ಅಂತಿಮವಾಗಿ, ಕುಲಸಚಿವರು ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು, ಎಲ್ಲಾ ಸಿಂಡಿಕೇಟ್ ಸದಸ್ಯರುಗಳಗೆ ಹಾಗೂ ಅಧಿಕಾರಿವರ್ಗದವರಿಗೆ ವಂದನೆಗಳನ್ನು ಸಲ್ಲಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಸಿದರು.

ಸದಸ್ಯ ಕಾರ್ಯದರ್ಶಿ ಹಾಗೂ ಕುಲಸಚಿವ

ಅಧ್ಯಕ್ಷರು ಹಾಗೂ ಮಾನ್ಯ ಕುಲಪತಿಗಳು